# ಭಾರತೀಯ ಸಂಸ್ಕೃತಿಯಲ್ಲಿ ಲಲಿತಕಲೆಗಳು

ಡಾ. ಇ. ವಸಂತ ಕುಮಾರ್

ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅಸಾಧಾರಣ ಸಮೃದ್ಧಿಯನ್ನು ಕಂಡ ಭಾರತೀಯ ಸಂಸ್ಕೃತಿ, ವೈವಿಧ್ಯಮಯವಾದ ಲಲಿತಕಲೆಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಎಲ್ಲ ರಸಗಳೂ ಕೊನೆಗೆ ಶಾಂತರಸದಲ್ಲಿ ಒಂದಾಗುವಂತೆ, ಎಲ್ಲ ಕಲೆಗಳೂ ಅಂತಿಮವಾಗಿ ಅಧ್ಯಾತ್ಮದಲ್ಲಿ ಸಾರ್ಥಕ್ಯವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ವಿಶೇಷ. ಈ ಕುರಿತು ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಭರತಖಂಡ ಪುರಾತನ ದೇಶ. ಹಿಂದೆ ಅದು ಬಹಳ ವಿಶಾಲವಾಗಿತ್ತು. ಕಾಲಕ್ರಮದಲ್ಲಿ ಅದರ ಸುತ್ತಮುತ್ತಲಿನ ಭಾಗಗಳು ಸ್ವತಂತ್ರ ದೇಶಗಳಾದುವು. ಭಾರತೀಯ ಸಂಸ್ಕೃತಿಯ ಕುರುಹುಗಳನ್ನು ಆ ದೇಶಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ನಮ್ಮ ದೇಶ ವಿಜ್ಞಾನ, ಗಣಿತ, ಕಲೆ ಮತ್ತು ನಾಗರಿಕತೆಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಪರಧರ್ಮೀಯರ, ಪರದೇಶೀಯರ ಒಂದು ಸಾವಿರ ವರ್ಷಗಳ ಆಕ್ರಮಣ ಮತ್ತು ಆಳ್ವಿಕೆಯಿಂದ ನಮ್ಮ ದೇಶದ ಪುರೋಗಮನ ಮತ್ತು ಬೆಳವಣಿಗೆ ಕುಂಠಿತವಾಯಿತು. ನಮ್ಮ ವಿದ್ಯಾಭ್ಯಾಸ ಪದ್ಧತಿ ಹಾಳಾಯಿತು. ನಮ್ಮ ಸಂಸ್ಕೃತಿಗೂ ಧಕ್ಕೆಯಾಯಿತು. ಇತರ ಧರ್ಮಗಳು ಕಾಲಿಟ್ಟವು. ಪರಕೀಯರ ಶೋಷಣೆಯಿಂದ ಜನಸಾಮಾನ್ಯರು ಬಡವರಾದರು. ನಮ್ಮದೆಂಬುದು ಹಿಂದೆ ಸರಿಯಿತು. ನಮ್ಮ ಮೂಲಭೂತ ನಂಬಿಕೆಗಳಿಗೆ ಘಾಸಿಯಾದರೆ ನಮ್ಮ ವ್ಯಕ್ತಿತ್ವದ ಬುಡಕ್ಕೇ ಕೊಡಲಿ ಪೆಟ್ಟು ತಾಕಿದಂತೆ. ಇದು ಭಾರತೀಯರ ಮನಸ್ಸಿನಲ್ಲಿ ಗೊಂದಲ ಉಂಟು ಮಾಡಿತು. ನಮ್ಮ ಆತ್ಮವಿಶ್ವಾಸ ಹೋಯಿತು. ಇದೇ ಪರದೇಶೀಯರು ನಮಗೆ ಮಾಡಿದ ದೊಡ್ಡ ಹಾನಿ ಎಂದು ಸ್ವಾಮಿ ವಿವೇಕಾನಂದರು, ಅವರು ಇನ್ನೂ ಆ ಹೆಸರಿನಿಂದ ಭಾರತೀಯರಿಗೆ ಪರಿಚಿತರಾಗುವ ಮುನ್ನವೇ, ತಮ್ಮ ಪರಿವ್ರಾಜಕ ಜೀವನದ ಕಾಲದಲ್ಲೇ ಹೇಳಿದರು. ಗಣಿತಶಾಸ್ತ್ರ ಮತ್ತು ವಿಜ್ಞಾನಗಳಲ್ಲಿ ಮಾಡಿದ ನಮ್ಮ ಆವಿಷ್ಕಾರಗಳು ಮತ್ತು ಶಾಸ್ತ್ರಗ್ರಂಥಗಳು ನಮ್ಮ ದೇಶದಿಂದ ಹೊರಗೆ ಹೋಗಿ ಬಹು ಕಾಲಾನಂತರ ಅನ್ಯಭಾಷೆಗೆ ತರ್ಜುಮೆಯಾಗಿ ಅನ್ಯ ದೇಶದವರ ಹೆಸರಿನಲ್ಲಿ ಹೊಸ ಆವಿಷ್ಕಾರದಂತೆ ನಮಗೆ ಹಿಂತಿರುಗಿ ಬಂದ ನಿದರ್ಶನಗಳು ಅನೇಕ. ಅವೆಲ್ಲ ಈಗ ಚರಿತ್ರೆಯಲ್ಲಿ ಸೇರಿವೆ.

### ಸಂಸ್ಕೃತಿ

ಒಂದು ದೇಶದ ಸಂಸ್ಕೃತಿ, ಅಲ್ಲಿನ ಜನಜೀವನವನ್ನು ಕುರಿತಾದುದು. ಅದರಲ್ಲಿ, ಭಾಷೆ ನಡೆ-ನುಡಿ ದೈನಂದಿನ ಜೀವನ ಸಾಮಾಜಿಕ ಜೀವನ ಆಹಾರಕ್ರಮ ಉಡಿಗೆ-ತೊಡಿಗೆ ವಾಣಿಜ್ಯ-ವ್ಯವಹಾರ ಮಾನಸಿಕ ಪ್ರವೃತ್ತಿ ಅಲಂಕರಣ ಸಾಹಿತ್ಯ ಕಾವ್ಯ ಸಂಗೀತ ನೃತ್ಯ ಚಿತ್ರ ಶಾಸ್ತ್ರಾದಿಗಳು - ಎಲ್ಲವೂ ಸೇರಿವೆ. ಇವೆಲ್ಲವೂ ಸಂಸ್ಕೃತಿಯ ಅಂಗಗಳು. ಇವು ನಮ್ಮ ಜೀವನಸಾಗರದ ಮೇಲೆ ಅಲೆಗಳಂತೆ ಕಾಣಿಸಿಕೊಳ್ಳುತ್ತವೆ. ಸಂಸ್ಕೃತಿ ಒಂದು ವಾದ್ಯಮೇಳದಂತೆ. ಹಲವು ಸುನಾದಗಳು ಮೇಳೈಸಿ ಮಧುರ ಸಂಗೀತ ಹೊಮ್ಮುವಂತೆ ಒಂದು ದೇಶದ ಸಂಸ್ಕೃತಿ ರೂಪು ತಾಳಿ ಅರಳುವುದು. ವಿವಿಧ ಫಲಪುಷ್ಪಗಳಿಂದ ತುಂಬಿದ ವೃಕ್ಷಗಳಂತೆ ಸಂಸ್ಕೃತಿ ರಾಜಿಸುವುದು.

### ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ

ಭಾರತೀಯ ಸಂಸ್ಕೃತಿ ಇತರ ಸಂಸ್ಕೃತಿಗಳಿಗಿಂತ ವಿಭಿನ್ನವಾದುದು. ಇದರ ವೈಶಿಷ್ಟತೆಯೆಂದರೆ, ಅದರ ಅಂಗಗಳೆಲ್ಲಕ್ಕೂ ಒಂದು ಸಮಾನ ಆಧಾರವಿದೆ. ಅದೇ ಧರ್ಮ. ನಮ್ಮ ಸಂಸ್ಕೃತಿಯ ಬಳ್ಳಿ ಧರ್ಮದ ಆಧಾರದ ಮೇಲೆ ಹಬ್ಬಿದೆ. ನಮ್ಮ ಶಾಸ್ತ್ರಗಳು ಧರ್ಮದ ಆಧಾರದ ಮೇಲೆ ರಚಿತವಾಗಿವೆ. ಈ ಸಮಾನ ಆಧಾರದ ಮೂಲಕ ಸಂಸ್ಕೃತಿಯ ಅಂಗಗಳೆಲ್ಲವೂ ಒಂದಕ್ಕೊಂದು ಸಂಬಂಧಿಸಿವೆ. ಮತ್ತು ಈ ಆಧಾರವೇ ಅವುಗಳ ಕೇಂದ್ರವಸ್ತು. ಧರ್ಮವನ್ನು ವಿವರಿಸುವುದಕ್ಕಾಗಿ, ಅದನ್ನು ನಿದರ್ಶಿಸುವುದಕ್ಕಾಗಿ, ಅದರ ಸಾರವನ್ನು ಜನಸಾಮಾನ್ಯರಿಗೆ ಸರಳವಾಗಿ ಮನಮುಟ್ಟುವಂತೆ ನಿರೂಪಿಸುವುದಕ್ಕಾಗಿ ಅವು ರೂಪುಗೊಂಡಿವೆ. ಅದರ ಹೊರತಾಗಿ ಇವಕ್ಕೆ ಅಸ್ತಿತ್ವವಿಲ್ಲ. ಭಾರತೀಯ ಸಂಸ್ಕೃತಿಯ ಈ ಕ್ಷೇತ್ರಗಳಲ್ಲಿ ಆಗಾಗ ಸಂಧಿಕಾಲಗಳಲ್ಲಿ ತಲೆದೋರಿದ ಸಮಸ್ಯೆಗಳಿಗೆ ವಿವರಣೆ ಧರ್ಮದಿಂದಲೇ ದೊರಕಿದೆ. ನಮ್ಮ ಧರ್ಮ ಸನಾತನವಾದುದರಿಂದ ನಮ್ಮ ಸಂಸ್ಕೃತಿ ಕಾಲಕ್ಕೆ ತಕ್ಕಂತೆ ಮಾರ್ಪಾಟಾಗುತ್ತಾ ಹೊಸ ಹೊಸ ರೂಪ ತಳೆಯುತ್ತ ಬೆಳೆಯುತ್ತಾ ವಿಕಾಸವಾಗುತ್ತಿದೆ. ಅಲ್ಲದೆ, ಹೊರಗಿನಿಂದ ಬಂದ ಅನ್ಯ ದೇಶಗಳ ಸಂಸ್ಕೃತಿಯನ್ನು ಹೀರಿಕೊಂಡು ಶ್ರೀಮಂತವಾಗುತ್ತಿದೆ.

### ಒಂದು ಉದಾಹರಣೆ

ನಮ್ಮ ವಿದ್ಯಾರ್ಥಿಗಳು ಕಲಿಯುತ್ತಿರುವ ಸಮಾಜಶಾಸ್ತ್ರ ಮತ್ತು ಮನಃಶಾಸ್ತ್ರಗಳು ಪಾಶ್ಚಾತ್ಯರಿಂದ ಬಂದವು. ಅವು ಧರ್ಮದ ಆಧಾರದ ಮೇಲೆ ರಚಿತವಾಗಿಲ್ಲ. ಅವನ್ನು ಎರಡು ಪ್ರತ್ಯೇಕ ಶಾಸ್ತ್ರಗಳಂತೆ ಅಧ್ಯಯನ ಮಾಡಲಾಗುತ್ತಿದೆ. ಆದರೆ

ನಮ್ಮ ದೇಶದ ಸಮಾಜಶಾಸ್ತ್ರ ಮತ್ತು ಮನಃಶಾಸ್ತ್ರಗಳು ಪರಸ್ಪರ ಪ್ರತ್ಯೇಕವಲ್ಲ, ಒಂದಕ್ಕೊಂದು ಸಂಬಂಧಪಟ್ಟಿವೆ. ಮತ್ತು ಅವೆರಡಕ್ಕೂ ಆಧಾರ ಧರ್ಮ. ಸಮಾಜಧರ್ಮ ಎಂಬುದಿದೆ; ಮನೋಧರ್ಮ ಎಂಬುದಿದೆ. ಸಮಾಜ ಮತ್ತು ಮಾನವನ ಮನಸ್ಸು — ಈ ಕ್ಷೇತ್ರಗಳಲ್ಲಿ ಬರುವ ಸಮಸ್ಯೆಗಳಿಗೆ ವಿವರಣೆ ಹಾಗೂ ಪರಿಹಾರ ಧರ್ಮದ ಮೂಲಕ ದೊರೆಯುತ್ತದೆ. ನಮ್ಮ ಧರ್ಮವನ್ನು ಚೆನ್ನಾಗಿ ತಿಳಿದ ಹೊರತು ನಮ್ಮ ಈ ಶಾಸ್ತ್ರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಸೂಕ್ಷ್ಮವಾದ ಮಾನವನ ಮನಸ್ಸನ್ನು ವಿಭಜಿಸಿ ವಿಶ್ಲೇಷಿಸುವುದರಲ್ಲಿ ನಮ್ಮ ಋಷಿಗಳು ಬಹಳ ಮುಂದೆ ಹೋಗಿರುವರು. ಈ ವಿಷಯವನ್ನು ಸ್ವಾಮಿ ವಿವೇಕಾನಂದರು ಅನೇಕ ಸಂದರ್ಭಗಳಲ್ಲಿ ತಿಳಿಸಿರುವರು. ಶಾಸ್ತ್ರಗಳು ಸಮಸ್ಯಾಪರಿಹಾರ ಸಾಧನಗಳು. ಅವನ್ನು ಕಲಿಯುವುದು ಉಪಯೋಗಿಸುವುದಕ್ಕಾಗಿ. ಪಾಶ್ಚಾತ್ಯರ ಸಮಾಜಶಾಸ್ತ್ರ ಮತ್ತು ಮನಶಾಸ್ತ್ರಗಳನ್ನು ನಮ್ಮ ಸಮಾಜ ಮತ್ತು ಸಂಸಾರವನ್ನು ಅರ್ಥಮಾಡಿಕೊಳ್ಳುವುದಕ್ಕೆ ಉಪಯೋಗಿಸುತ್ತಿರುವುದರಿಂದ ಸಮಸ್ಯೆಗಳು ಪರಿಹಾರವಾಗದೆ ತೊಡಕಾಗುತ್ತಿವೆ. ನಮ್ಮ ಶಿಕ್ಷಣಸಂಸ್ಥೆಗಳಲ್ಲಿ ಇವುಗಳ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳಲ್ಲಿ ಈ ಅಸಮರ್ಪಕತೆಯನ್ನು ಕಾಣಬಹುದು.

### ಸಂಸ್ಕೃತಿ-ಕಲೆ


ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ದೇಶಗಳಲ್ಲಿ ಮಾತ್ರವೇ ಕಲೆ ಅಭಿವೃದ್ಧಿಯಾಗಲು ಸಾಧ್ಯ. ಪರಕೀಯರ ಆಕ್ರಮಣದಿಂದ ನಮ್ಮ ವಿಜ್ಞಾನ ಮತ್ತು ಕಲೆಯ ಬೆಳವಣಿಗೆ ಕುಂಠಿತವಾದರೂ, ಕಲಾಕೃತಿಗಳು ದೇವಸ್ಥಾನಗಳು ನಷ್ಟವಾದರೂ ನಮ್ಮ ದೇಶದ ಕಲೆ ಅಷ್ಟಾಗಿ ಬಾಧಿತವಾಗಲಿಲ್ಲ. ಬದಲಾಗಿ, ಪರಧರ್ಮೀಯರಾದರೂ ನೈಜಾಮಿಯಾ ಸರ್ಕಾರದಂತಹವರು ಅಜಂತ-ಎಲ್ಲೋರದಂತಹ ಅದ್ಭುತ ಚಿತ್ರಕಲೆ ಮತ್ತು ವಾಸ್ತುಶಿಲ್ಪಗಳನ್ನೊಳಗೊಂಡ ವಿಸ್ತಾರವಾದ ಗುಹೆಗಳನ್ನು ರಕ್ಷಿಸಿ ಪುನರುಜ್ಜೀವನಗೊಳಿಸಿದರು. ಸಂಸ್ಕೃತಿ ಎಂಬ ಸಂಸ್ಕೃತ ಶಬ್ದಕ್ಕೆ ಚೆನ್ನಾಗಿ ಪರಿಷ್ಕಾರವಾಗಿ ಮಾಡುವುದು ಎಂದು ಅರ್ಥ. ಕಲೆ ಎಂದ ಕೂಡಲೆ ಸೌಂದರ್ಯ, ರಸ, ಆನಂದ ಎಂಬುವು ಧ್ವನಿತವಾಗುತ್ತವೆ. ಕಲೆ ಸಂಸ್ಕೃತಿಯ ಭಾಗ. ಅಧ್ಯಾತ್ಮ ನಮ್ಮ ದೇಶದ ಉಸಿರಾಗಿರುವುದರಿಂದ ನಮ್ಮ ಸಂಸ್ಕೃತಿ ಧಾರ್ಮಿಕವಾಗಿರುವುದು ಸಹಜ. ಕಲೆಗಳು ಶ್ರೇಷ್ಠ ಮಟ್ಟಕ್ಕೆ ಬೆಳೆಯಬೇಕಾದರೆ ಆ ದೇಶದ ಜನರು ಶಾಂತಿಪ್ರಿಯರಾಗಿರಬೇಕು. ಭಾರತೀಯರಲ್ಲಿ ಎರಡು ಗುಣಗಳು ಅನಾದಿಕಾಲದಿಂದಲೂ ಇವೆ. ಮೊದಲನೆಯದೇ ಧಾರ್ಮಿಕತೆ. ಎರಡನೆಯದು, ಅವರೆಂದಿಗೂ ಇತರ ದೇಶಗಳ ಮೇಲೆ ಆಕ್ರಮಣ ಮಾಡಲಿಲ್ಲ. ಅದು ನಮ್ಮ ಹಿರಿಮೆ. ಭಾರತ ಹೊರತಾಗಿ, ಇತರ ದೇಶಗಳ ಮೇಲೆ ಆಕ್ರಮಣ ಮಾಡದೇ ಇರುವ ದೇಶ ಮತ್ತಾವುದಾದರೂ ಇದ್ದರೆ ತೋರಿಸಿ. ಶಾಂತಿ, ಮೌನಗಳೇ ಭಾರತೀಯನ ಮುಖ್ಯ ಲಕ್ಷಣಗಳು. ಅದರ ಹಿಂದೆ ಅದ್ಭುತ ಶಕ್ತಿ ಇದೆ. ಸುಂದರ, ಅದ್ಭುತ ಪ್ರಕೃತಿಯನ್ನು ಆಸ್ವಾದಿಸಿ ಆರಾಧಿಸಿದ ಆರ್ಯರು ಅಂತರ್ಮುಖಿಗಳಾದರು ಎಂದು ಸ್ವಾಮಿ ವಿವೇಕಾನಂದರು ಹೇಳಿದರು. ನಮ್ಮ ಸತ್ಯಾನ್ವೇಷಕರು ತಪಸ್ವಿಗಳಾದರು. ನಮ್ಮ ದೇಶದಲ್ಲಿ ಕಲೆ ತಪಸ್ಸಿನಿಂದ ಸೃಷ್ಟಿಯಾಗಿ ನಮ್ಮ ಜನಾಂಗದ ಎಲ್ಲಾ ಸ್ತರಗಳಲ್ಲಿಯೂ ಪ್ರವೇಶಿಸಿ ಶ್ರೇಷ್ಠ ಮಟ್ಟಕ್ಕೆ ಬೆಳೆಯಿತು.

### ಲಲಿತ ಕಲೆಗಳು

ಬಹುತೆರನಾದ ಅನೇಕ ಲಲಿತ ಕಲೆಗಳು ನಮ್ಮ ದೇಶದಲ್ಲಿ ಎಲ್ಲೆಡೆ ಕಾಣಬರುತ್ತವೆ. ಅವುಗಳ ಮೂಲ, ಅಸ್ತಿತ್ವ, ಬೆಳವಣಿಗೆ – ಇವೆಲ್ಲಕ್ಕೂ ದಾಖಲೆಗಳಿಲ್ಲ. ಅವುಗಳಲ್ಲಿ ಕೆಲವು ಲುಪ್ತವಾಗಿರಬಹುದು. ಹೊಸ ಬಗೆಯ ಲಲಿತಕಲೆಗಳು ಉದಯಿಸುತ್ತಿರುವುದೂ ನಿಜ. ಆದರೆ, ಆರ್ಷೇಯವಾದ, ಎಲ್ಲಾ ಕಾಲದಲ್ಲಿಯೂ ಕಾಣಬರುವ ಮತ್ತು ನಮ್ಮ ಪ್ರಾಚೀನ ಸಂಸ್ಕೃತಿ ಮತ್ತು ನಾಗರಿಕತೆಗೆ ಮಾನದಂಡದಂತಿರುವ ಹಾಗೂ ಈಗಲೂ ಮುಂದುವರಿಯುತ್ತಿರುವ ಕೆಲವು ಲಲಿತಕಲೆಗಳೆಂದರೆ ಕಾವ್ಯ, ಸಂಗೀತ, ನಾಟ್ಯ, ವಾಸ್ತುಶಿಲ್ಪ, ಪ್ರತಿಮಾಶಿಲ್ಪ ಮತ್ತು ಚಿತ್ರಕಲೆ. ಇವುಗಳ ಇತಿಹಾಸ, ಬೆಳವಣಿಗೆ, ಸಾಮರಸ್ಯ, ಸಂಯೋಜನೆ, ಶ್ರೀಮಂತಿಕೆ ಮತ್ತು ಮೂಲಾಂಶವನ್ನು ಅಧ್ಯಯನ ಮಾಡಿದ ಸ್ವದೇಶೀಯರು ಮತ್ತು ವಿದೇಶೀಯರು ಕುತೂಹಲರಾಗಿ ಆಶ್ಚರ್ಯಪಟ್ಟು ಆಕರ್ಷಿತರಾಗಿದ್ದಾರೆ. ಮೂಲ ಸಿಂಹಳ ದೇಶದ ಜಗತ್ಪ್ರಸಿದ್ಧ ಕಲಾವಿಮರ್ಶಕರಾದ ಆನಂದ ಕೆಂಟಿಷ್ ಕುಮಾರಸ್ವಾಮಿಯವರಂತಹವರು ಭಾರತೀಯ ಕಲೆಯ ಬಗ್ಗೆ ಅದರ ಸೌಂದರ್ಯ ಮತ್ತು ಹಿರಿಮೆಗಳನ್ನು ಅನೇಕ ಹೊತ್ತಿಗೆಗಳಲ್ಲಿ ವಿಶದವಾಗಿ ಸುಂದರವಾಗಿ ಬರೆದು ವಿದೇಶಗಳಲ್ಲಿ ಪ್ರಕಟಿಸಿದ್ದಾರೆ.

### ಕಾವ್ಯ

ಕಾವ್ಯ, ಸಾಹಿತ್ಯದ ಅಂಗ. ಭಾರತೀಯ ಭಾಷೆಗಳು ಮತ್ತು ಸಾಹಿತ್ಯ ಪ್ರಾಚೀನ ಮತ್ತು ವೈವಿಧ್ಯಮಯ. ಪಾಲಿ ಮತ್ತು ಸಂಸ್ಕೃತದ ಸಾಹಿತ್ಯವೇ ಅಪಾರವಾಗಿದ್ದರೂ ದೇಶೀಯ ಭಾಷೆಗಳೂ ಹುಲುಸಾಗಿ ಬೆಳೆದು ಶ್ರೀಮಂತ ವಾಗಿ ಶ್ರೀಸಾಮಾನ್ಯರಿಗೆ ಹತ್ತಿರವಾಗಿವೆ. ಕಾವ್ಯವೆಂದರೆ ಪದ್ಯವೇ ಆಗಬೇಕೆಂದಿಲ್ಲ. ಗದ್ಯಕಾವ್ಯಗಳೂ ಇವೆ. ಕಾವ್ಯದ ಮುಖ್ಯ ಗುಣ ರಸ.



ನವರಸಗಳಲ್ಲಿ ಯಾವುದು ಕಾವ್ಯ ದಲ್ಲಿ ಪ್ರಧಾನವಾಗಿ ಇದೆಯೋ ಅದು ಅಂತಹ ಕಾವ್ಯವಾಗುವುದು. ಕಾವ್ಯಕ್ಕೆ ಒಂದು ಕಥಾವಸ್ತು ಇರುತ್ತದೆ. ಕಡಿಮೆ ಶಬ್ದಗಳಲ್ಲಿ ಅದರ ಹೃದಯವನ್ನು ನಮ್ಮ ಮನಮುಟ್ಟುವಂತೆ ವರ್ಣಿಸುವ ಪ್ರತಿಭೆಯುಳ್ಳವರು ಕವಿ ಗಳು. ಅವರು ಅಲಂಕಾರ ಉಪಮೆ ಮುಂತಾದವುಗಳ ಮೂಲಕ ಅವರ ಕಥಾಪ್ರಪಂಚಕ್ಕೆ ನಮ್ಮನ್ನು ಕರೆದೊಯ್ಯುವರು. ರಾಮಾಯಣ ಮತ್ತು ಮಹಾಭಾರತಗಳನ್ನು ಇತಿಹಾಸವೆಂದು ವರ್ಗೀಕರಿಸಿ ದ್ದರೂ ಅವು ಮಹಾಕಾವ್ಯಗಳೇ. ಅವುಗಳ ಕಥಾವಸ್ತು, ಅದ ರಲ್ಲಿ ಸುಳಿದಾಡುವ ಪಾತ್ರಗಳು, ಮಾನವೀಯ ಭಾವನೆಗಳು, ಆಧ್ಯಾತ್ಮಿಕ ತತ್ತ್ವಗಳು, ಅಲ್ಲಲ್ಲಿ ಬರುವ ಪ್ರಕೃತಿ ವರ್ಣನೆ, ಮತ್ತು ಅತ್ಯಂತ ಮುಖ್ಯವಾಗಿ ಕಾವ್ಯದ ಪ್ರಧಾನ ವಸ್ತುವಾದ ಧರ್ಮ ಎಷ್ಟು ರಮಣೀಯವಾಗಿ ಆಳವಾಗಿ ಮೂಡಿದೆಯೆಂದರೆ, ಅವು ನಮ್ಮ ಜನಜೀವನದ ಸಂಸ್ಕೃತಿಯಲ್ಲಿ ಒಂದಾಗಿವೆ. ಅವು ಮಹಾ ಕಾವ್ಯಗಳೂ ಹೌದು, ಬೃಹತ್ಕಾವ್ಯಗಳೂ ಹೌದು. ಅವುಗಳ ಸಣ್ಣ ಪುಟ್ಟ ಭಾಗಗಳನ್ನೇ, ಪಾತ್ರಗಳನ್ನೇ ಆಧರಿಸಿ ಸ್ವತಂತ್ರ ಕಾವ್ಯ ಗಳನ್ನು ರಚಿಸಿರುವರು. ಮೂಲ ಸಂಸ್ಕೃತದಲ್ಲಿರುವ ಈ ಕಾವ್ಯ ಗಳು ಎಲ್ಲಾ ದೇಶೀಯ ಭಾಷೆಗಳಿಗೂ ಅನುವಾದವಾಗಿವೆ. ಅಷ್ಟೇ ಅಲ್ಲದೆ, ದೇಶಭಾಷೆಯ ಕವಿಗಳು ಸ್ಫೂರ್ತಿಗೊಂಡು ಅವರ ಭಾಷೆ ಯಲ್ಲಿ ಸ್ವತಂತ್ರ ಕಾವ್ಯವಾಗಿ ಅವನ್ನು ರಚಿಸಿದ್ದಾರೆ. ಇಷ್ಟೊಂದು ಭಾಷೆಗಳಿರುವ ದೇಶ ಒಂದಾಗಿರಲು ಸಾಧ್ಯವೇ ಎಂದು ಇತರ ದೇಶಗಳು ಅಚ್ಚರಿಪಡುತ್ತವೆ. ಬಹುಭಾಷಾ ನದಿಗಳ ಒಳಗೆ ಗುಪ್ತ ಗಾಮಿನಿಯಾಗಿ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಮಹಾನದಿ ಹರಿ ಯುತ್ತಿರುವಳು. ನಮ್ಮ ಸಾಹಿತ್ಯದಲ್ಲಿ ಧಾರ್ಮಿಕ ಸಾಹಿತ್ಯವೇ ಅಪಾರವಾಗಿದ್ದರೂ ಇತರ ಸಾಹಿತ್ಯಗಳೂ ಅಷ್ಟೇ ಪ್ರಮಾಣದಲ್ಲಿ ಬೆಳೆದಿವೆ.


ಕಾವ್ಯ ಭಾವಸಾಮ್ರಾಜ್ಯಕ್ಕೆ ಸೇರಿದುದು. ಅದು ಮನೋಜ್ಞ ವಾಗಿರುತ್ತದೆ. ಅದು ಹೃದಯದ ಭಾಷೆ; ಬೇಗನೆ ನಮ್ಮ ಮನ ಸ್ಸನ್ನು ಮುಟ್ಟುತ್ತದೆ. ಕರ್ಣನ ಮೈತ್ರಿ ಮತ್ತು ತ್ಯಾಗ, ಹರಿಶ್ಚಂದ್ರನ ಸತ್ಯನಿಷ್ಠೆ, ಏಕಲವ್ಯನ ಗುರುಭಕ್ತಿ, ಗೋಪಿಯರ ಕೃಷ್ಣಪ್ರೇಮ ಮುಂತಾದ ಯಾವ ಮಾನವೀಯ ಭಾವನೆಗಳನ್ನು ಕವಿ ತನ್ನ ಕಾವ್ಯದಲ್ಲಿ ಮೂಡಿಸಿದ್ದಾನೆಯೊ ಆ ಭಾವನೆಗಳು ನಮ್ಮ ಮನಸ್ಸಿನಲ್ಲಿ ಸ್ಫುರಿಸುತ್ತವೆ, ಆ ಕಾವ್ಯವನ್ನು ನಾವು ಓದಿದಾಗ. ಹೀಗೆ ರಸಾನುಭವ ಆಗುವುದು, ನಮ್ಮ ಹೃದಯವಂತಿಕೆ ಶ್ರೀಮಂತ ವಾಗುವುದು. ಇದೇ ಕಾವ್ಯದ ಉಪಯೋಗ. ಇಂತಹ ಅನುಭವ ಗದ್ಯಕಾವ್ಯಗಳ ಮೂಲಕವೂ ಆಗುವುದು. ನಾಟಕ ಮತ್ತು ಕಥೆ ಗಳೂ ಹೀಗೆ ನಮ್ಮ ಮನಸ್ಸನ್ನು ರಂಜಿಸುವುವು.

## ಕಾವ್ಯ-ಸಂಗೀತ

ಕಾವ್ಯದ ಮತ್ತೊಂದು ಗುಣವೆಂದರೆ ಗೇಯತೆ, ಹಾಡು ವುದಕ್ಕೆ ಅನುವಾಗಿರುವುದು. ಎಲ್ಲಾ ಕಾವ್ಯಗಳೂ ಗೇಯ ಕಾವ್ಯ ಗಳಲ್ಲ, ರಾಮಾಯಣ ಗೇಯ ಕಾವ್ಯ. ಪದ್ಯಕಾವ್ಯಗಳಲ್ಲಿ ಈ ಗುಣ ಇರುತ್ತದೆ. ಸ್ತೋತ್ರಸಾಹಿತ್ಯವೂ ಈ ಗುಂಪಿಗೆ ಸೇರಿದೆ. ಕಾವ್ಯಗಳನ್ನೋದುವುದರಿಂದ ನಮ್ಮ ಹೃದಯ ಕಾವ್ಯರಸದಲ್ಲಿ ತೋಯುತ್ತದೆ. ಆದರೆ ಆ ಕಾವ್ಯದ ಒಂದು ಪದ್ಯವನ್ನೊ ಶ್ಲೋಕ ವನ್ನೋ ಹಾಡಿದಾಗ ನಮ್ಮ ಮನಸ್ಸು ಕ್ಷಣ ಮಾತ್ರದಲ್ಲಿ ಆ ಭಾವನೆ ಯಲ್ಲಿ ಲೀನವಾಗುತ್ತದೆ, ಮತ್ತು ಬಹಳ ಕಾಲ ಅದರಲ್ಲಿ ನೆಲೆ ಸಿರುತ್ತದೆ. ಅದು ನೆನಪಾದಾಗಲೆಲ್ಲ ನಾವು ಆ ಭಾವವನ್ನು ಅನು ಭವಿಸುವೆವು. ಇದೇ ಕಾವ್ಯಕ್ಕೂ (ಅಥವಾ ಸ್ತೋತ್ರಕ್ಕೂ) ಸಂಗೀ ತಕ್ಕೂ ಇರುವ ಸಂಬಂಧ. ಯಾವ ಭಾವವನ್ನು ಕಾವ್ಯದಲ್ಲಿ ವಿವರಿಸಲು ಹಲವು ವಾಕ್ಯಗಳು ಬೇಕಾಗಬಹುದೊ ಅದನ್ನು ಒಂದು ಪದದ ಉಚ್ಚಾರಣೆಯ ರೀತಿಯಿಂದಲೇ ನಮ್ಮ ಮನಸ್ಸಿನಲ್ಲಿ ಸ್ಫುರಿಸುವಂತೆ ಮಾಡಬಲ್ಲದು ಸಂಗೀತ.

## ಭಾರತೀಯ ಸಂಗೀತ

ನಮ್ಮ ದೇಶದಲ್ಲಿ ಸಂಗೀತ ಅತ್ಯಂತ ಶ್ರೀಮಂತವಾಗಿ ಬೆಳೆದಿದೆ. ನಮ್ಮಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಅಥವಾ ಹಿಂದೂ ಸ್ತಾನಿ ಮತ್ತು ಕರ್ನಾಟಕ ಎಂಬ ಎರಡು ಸಂಗೀತ ಪದ್ಧತಿಗಳು



ಇವೆ. ಬಹುಶಃ ಇನ್ನಾವ ದೇಶದಲ್ಲಿಯೂ ಎರಡು ಪ್ರಬುದ್ಧ ವಿಕಸಿತ ಸಂಗೀತ ಪದ್ಧತಿಗಳನ್ನು ನೋಡಲಾರೆವು. ಇವೆರಡರ ರೂಪರೇಷೆಗಳು ವಿಭಿನ್ನವಾಗಿ ಕಂಡರೂ ಅವುಗಳ ಆಧಾರ ಒಂದೇ ಆಗಿದೆ. ರಾಗ ಒಂದೇ ಆದರೂ ಅದರ ಸ್ವರಗಳನ್ನು ಹಾಡುವ ಶೈಲಿ ಬೇರೆಯಾಗಿದೆ. ಭಿನ್ನತೆಗಿಂತ ಸಾಮ್ಯಗಳು ಹೆಚ್ಚಾಗಿವೆ. ಇವೆರಡೂ ತಿಳಿಯಲು ಮನೋಜ್ಞವಾಗಿವೆ. ಎರಡು ಪದ್ಧತಿ ಗಳಿಗೂ ಸಾಮಾನ್ಯವಾದ ರಾಗಗಳು ಅನೇಕವಿವೆ. ಅನೇಕ ರಾಗ ರಾಗಿಣಿಗಳು ಉತ್ತರದಿಂದ ದಕ್ಷಿಣಕ್ಕೂ, ದಕ್ಷಿಣದಿಂದ ಉತ್ತರಕ್ಕೂ ಹೋಗಿವೆ. ಗಾಯನ, ವಾದನ ಶೈಲಿಗಳಿವೆ. ವಿವಿಧ ವಾದ್ಯಗಳಿವೆ. ಶ್ರುತಿ-ಲಯಗಳ ಹೊಂದಾಣಿಕೆ, ಅದ್ಭುತ ವಿನ್ಯಾಸ ಮತ್ತು ಸಂಯೋಜನೆಯನ್ನು ಮತ್ತಾವ ದೇಶದ ಸಂಗೀತ ಪದ್ಧತಿ ಯಲ್ಲಿಯೂ ಇಷ್ಟರ ಮಟ್ಟಿಗೆ ಕಾಣಲಾಗುವುದಿಲ್ಲ. ಭಕ್ತಿ ಸಂಗೀತ

ಅಥವಾ ಭಜನ ಶೈಲಿಗಳು ಎರಡು ಪದ್ಧತಿಗಳಲ್ಲಿಯೂ ಇವೆ. ಇಷ್ಟೇ ಅಲ್ಲದೆ ಲಲಿತ ಸಂಗೀತವಿದೆ. ಈ ಎರಡು ಪದ್ಧತಿಗಳು ಬೇರೆ ರೀತಿಯಾಗಿ ಬೆಳೆಯಲು ಚಾರಿತ್ರಿಕ ಕಾರಣಗಳೂ ಇವೆ. ಉತ್ತರ ಭಾರತದಲ್ಲಿ ಸಂಗೀತ ಹೆಚ್ಚಾಗಿ ರಾಜರುಗಳ ಆಶ್ರಯ ದಲ್ಲಿ ಬೆಳೆಯಿತು. ದಕ್ಷಿಣದಲ್ಲಿ ಸಂಗೀತ ಕಛೇರಿಗಳು ದೇವಸ್ಥಾನ ಗಳಲ್ಲಿ ಏರ್ಪಾಡಾಗುತ್ತಿದ್ದು ಜನಸಾಮಾನ್ಯರು ಅದನ್ನು ಮುಕ್ತ ವಾಗಿ ಅನುಭವಿಸುತ್ತಿದ್ದು ಭಕ್ತಿಸಾಹಿತ್ಯ ಅದರಲ್ಲಿ ಹೆಚ್ಚು ಮಿಳಿತ ವಾಗಿದೆ ಎಂದು ವಿಶ್ವವಿಖ್ಯಾತ ಸಿತಾರ್ ವಾದಕರಾದ ಕೀರ್ತಿಶೇಷ ಪಂಡಿತ್ ರವಿಶಂಕರ್ ಅವರು ಅಭಿಪ್ರಾಯಪಟ್ಟಿದ್ದಾರೆ.

### ಹಿಂದೂಸ್ತಾನಿ ಸಂಗೀತ

ಹೆಚ್ಚಾಗಿ ರಾಜರ ಆಸ್ಥಾನದಲ್ಲಿ ಕಛೇರಿಗಳು (ಮೆಹ್‌ಫಿಲ್) ನಡೆಯುತ್ತಿದ್ದುದರಿಂದಲೋ ಏನೋ ರಾಜರ ದರ್ಬಾರಿನಲ್ಲಿ ಮಂದಗತಿಯಲ್ಲಿ ಸಾವಧಾನವಾಗಿ ವಿಸ್ತರಿಸಲ್ಪಡುವ ವಿಲಾಸ್ ಖಾನಿ ತೋಡಿ, ದರ್ಬಾರಿ ಕಾನಡಾ ಮುಂತಾದ ರಾಗಗಳು ಉತ್ತರಾದಿ ಪದ್ಧತಿಯಲ್ಲಿ ಇವೆ. ಅಲ್ಲದೆ ದಿನದ ಜಾವಗಳಲ್ಲಿ - ಮುಂಜಾನೆ, ಬೆಳಗ್ಗೆ, ಮಧ್ಯಾಹ್ನ, ಸಂಜೆ, ಸಂಧ್ಯಾಕಾಲ, ಮಧ್ಯರಾತ್ರಿ — ಹಾಡುವ ರಾಗಗಳಿವೆ. ಇವನ್ನು ಆಯಾ ಕಾಲ ದಲ್ಲಿ ಹಾಡಿದಾಗ ಆ ಸಮಯದ ಅನುಭವ ನಮಗೆ ಉಂಟಾ ಗುತ್ತದೆ. ಇವಲ್ಲದೆ ಋತುಕಾಲಗಳಿಗೆ ಹೊಂದುವ ರಾಗ ಗಳಿವೆ. ಮೇಘಮಲ್ಹಾರ್, ಬಸಂತ್ ಬಹಾರ್ ಮುಂತಾದ ರಾಗಗಳು ಮಳೆ ಸುರಿಯುವ, ವಸಂತ ಕಾಲದ ಅನುಭವ ನೀಡು ತ್ತವೆ. ಕರುಣಾರಸ, ರೌದ್ರ ಮೊದಲಾದ ಭಾವಗಳನ್ನು ಸ್ಫುರಿಸುವ ರಾಗ ಗಳೂ ಇವೆ.

ಸಂಗೀತ ರಾಜಾಸ್ಥಾನಕ್ಕೆ ಸೀಮಿತವಾಗದೆ ಜನಸಾಮಾನ್ಯರಿಗೆ ದೊರಕಬೇಕೆಂಬ ಉದ್ದೇಶದಿಂದ ಪಂಡಿತ ವಿಷ್ಣು ದಿಗಂಬರ್ ಪಳೂಸ್ಕರ್ ಎಂಬ ಪ್ರಸಿದ್ಧ ಸಂಗೀತಗಾರರು ೨೦ನೆ ಶತಮಾನದ ಪ್ರಾರಂಭದಲ್ಲಿ ಆಸ್ಥಾನ ವಿದ್ವಾಂಸರ ಸ್ಥಾನವನ್ನು ತ್ಯಜಿಸಿ, ರಸ್ತೆ ಗಳಲ್ಲಿ ಭಜನೆ ಹಾಡಲಾರಂಭಿಸಿದರು. ಸಂತರಂತೆ ಜೀವನ ನಡೆಸು ತ್ತಿದ್ದರು. ಅವರ ಕಂಠ, ಶಾಂತಿ ಭಕ್ತಿಗಳನ್ನು ಅವರ ಗಾಯನದಲ್ಲಿ ಸೂಸುತ್ತಿತ್ತು. ಗಾಂಧರ್ವ ಮಹಾವಿದ್ಯಾಲಯದ ಹೆಸರಿನಲ್ಲಿ ಸಂಗೀತ ಶಾಲೆಗಳನ್ನು ಅನೇಕ ಕಡೆ ಆರಂಭಿಸಿದರು. ಇದೊಂದು ಚಾರಿತ್ರಿಕ ಘಟನೆಯಾಯಿತು. ಅಪ್ರಾಪ್ತ ವಯಸ್ಸಿನಲ್ಲಿ ಕಾಲ ವಾದ ಅವರ ಏಕ ಮಾತ್ರ ಪುತ್ರ, ದತ್ತಾತ್ರೇಯ ವಿಷ್ಣು ಪಳೂಸ್ಕರ್, ಮತ್ತು ಶಿಷ್ಯರಾದ ವಿನಾಯಕ ಪಟವರ್ಧನ್, ನಾರಾಯಣ ರಾವ್ ವ್ಯಾಸ್, ಓಂಕಾರ್‌ನಾಥ್ ಠಾಕೂರ್ ಮೊದಲಾದ ದಿಗ್ಗಜ ಸಂಗೀತಗಾರರು ವಿದ್ಯಾಲಯವನ್ನು ಕೆಲವು ಕಾಲ ನಡೆಸಿ ದರು.

### ಕರ್ನಾಟಕ ಸಂಗೀತ

ಕರ್ನಾಟಕ ಸಂಗೀತ ಯಾವಾಗಲೂ ದೇವಸ್ಥಾನದ ಪೂಜೆ, ಸೇವೆ, ಉತ್ಸವಗಳು, ವಿಶೇಷ ಪೂಜಾದಿನಗಳು — ಇವುಗ ಳೊಂದಿಗೆ ಸಂಬಂಧಿಸಿತ್ತು. ಕಛೇರಿಗಳೂ ಕೂಡ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿದ್ದುವು. ಎಲ್ಲರೂ ಅಣ್ಣಮಾಚಾರ್ಯರ ಕೀರ್ತನೆಗಳನ್ನು ಹಾಡುತ್ತಿದ್ದರು. ನಂತರ ಪುರಂದರದಾಸರ ಕೀರ್ತನೆಗಳನ್ನು ಎಲ್ಲರೂ ಹಾಡಲಾರಂಭಿಸಿದರು. ನಂತರ ೧೮ನೆ ಶತಮಾನದಲ್ಲಿ ತ್ಯಾಗರಾಜರು, ಶ್ಯಾಮಾಶಾಸ್ತ್ರಿಗಳು ಹಾಗೂ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಕಾಲ ಪ್ರಾರಂಭವಾಯಿತು. ಇವರಲ್ಲದೆ ಸ್ವಾತಿ ತಿರುನಾಳ ಮಹಾರಾಜರ ಕೀರ್ತನೆಗಳೂ ಪ್ರಚ ಲಿತವಾದುವು. ಅವರೆಲ್ಲ ಸಮಕಾಲೀನರು. ಇವರ ಕೀರ್ತನೆ ಗಳೆಲ್ಲ ದೇವದೇವಿಯರನ್ನು ಕುರಿತಾಗಿವೆ. ಶ್ರೀತ್ಯಾಗರಾಜರು ಇದ್ದುದು ತಮಿಳುನಾಡಿನ ಹೃದಯಭಾಗವಾದ ತಂಜಾವೂರಾ ದರೂ ಅವರ ರಚನೆಗಳು ತೆಲುಗಿನಲ್ಲಿವೆ. ಅವರು ಸಂತರು, ಶ್ರೀರಾಮನ ಭಕ್ತರು. ಭಿಕ್ಷೆಯಿಂದ ದೊರೆತ ಧಾನ್ಯಗಳನ್ನು ಅಡಿಗೆ ಮಾಡಿ ರಾಮನಿಗೆ ನಿವೇದಿಸಿ ಅತಿಥಿಗಳಿಗೆ ಕೊಟ್ಟು ಪ್ರಸಾದವನ್ನು ಅವರು ಸ್ವೀಕರಿಸುತ್ತಿದ್ದರು. ಉಂಛವೃತ್ತಿಯ ಭಾಗವತರೆಂದೇ ಪ್ರಸಿದ್ಧರಾಗಿದ್ದರು. ಕೋಟಿ ರಾಮನಾಮ ಜಪವನ್ನು ಮಾಡಿ ದರು. ಅವರ ರಚನೆಗಳೆಲ್ಲಾ ಶ್ರೀರಾಮನ ನಾಮಗುಣಸಂಕೀ ರ್ತನೆಯಾಗಿವೆ. ಅವರ ಮನೆಯಲ್ಲಿ ಭಜನೆ ನಡೆಯುತ್ತಿತ್ತು. ಶ್ರೀರಾಮನಲ್ಲಿ ಅವರದು ಸಂತಾನ ಭಾವ, ದಾಸ್ಯಭಾವ. ರಾಮನೇ ತಂದೆ. ರಾಮನೇ ಸ್ವಾಮಿ. ಅವರು ಆಧ್ಯಾತ್ಮಿಕ ಜೀವಿ ಗಳು. ಭಕ್ತಿ ವೈರಾಗ್ಯಗಳೇ ಅವರ ಸಂಪತ್ತು. ಶರಣಾಗತಿಯೇ ಅವರು ಉಸಿರು. ಸಂಗೀತ ಕಲೆಗೆ ಅವರ ಮುಖ್ಯ ಕೊಡುಗೆ ಎಂದರೆ, ಅವರ ರಚನೆಗಳು — ಕಲಿಯಲು ಪ್ರಾರಂಭಿಸುವವ ರಿಂದ ಪಂಡಿತರವರೆಗೆ ಬೇಕಾದ ಅತಿ ಸರಳ, ಸರಳ, ಮಧ್ಯಮ, ಪ್ರೌಢ, ಅತಿಪ್ರೌಢ ಮಟ್ಟದ ಕೀರ್ತನೆಗಳನ್ನು ರಚಿಸಿ ಅವಕ್ಕೆ ರಾಗ, ತಾಳ ಮತ್ತು ಸ್ವರಗಳನ್ನು ಸಂಯೋಜಿಸಿದುದು. ಸಂಗೀತ ಶಿಕ್ಷಣಕ್ಕೆ ಬೇಕಾದ ಸಾಧನ ಸಾಮಗ್ರಿಯನ್ನು ದೊಡ್ಡ ಪ್ರಮಾಣದಲ್ಲಿ ಇವರು ಒದಗಿಸಿದರು. ಹಾಗೆಯೇ ಸುಬ್ರಹ್ಮಣ್ಯ ಮತ್ತು ದೇವಿಯ ದೀಕ್ಷಿತ-ಭಕ್ತರಾದ ಮುತ್ತುಸ್ವಾಮಿ ದೀಕ್ಷಿತರು ಸಂಸ್ಕೃತದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದರು. ತಮ್ಮ ಯೌವನ ಕಾಲದಲ್ಲೇ ಅವರ ಗುರುಗಳೊಂದಿಗೆ ಕಾಶಿಗೆ ಹೋಗಿದ್ದರು. ಅಲ್ಲಿ



ಹಿಂದೂಸ್ತಾನಿ ಸಂಗೀತ ಕೇಳಲು ಸಾಧ್ಯವಾಯಿತು. ದಕ್ಷಿಣ ದೇಶದಲ್ಲಿ ಹಾಡು ತ್ತಿದ್ದ ಹಿಂದೂಸ್ತಾನಿ ರಾಗಗಳಾದ ಕೇದಾರ, ಹಿಂದೋಳ, ವಸಂತ, ಸಾರಂಗ, ದ್ವಿಜಾವಂತಿ ಮುಂತಾದವುಗಳಲ್ಲಿ ಸ್ವರಗಳು ಲುಪ್ತ ವಾಗಿದ್ದುದನ್ನು ಗಮನಿಸಿದ ದೀಕ್ಷಿತರು ದಕ್ಷಿಣಕ್ಕೆ ಹಿಂದಿರುಗಿದ ಬಳಿಕ ಆ ರಾಗಗಳಲ್ಲಿ ಅನೇಕ ಕೃತಿಗಳನ್ನು ರಚಿಸಿ ಆ ರಾಗಗಳ ಸರಿಯಾದ ರೂಪವನ್ನು ರಕ್ಷಿಸಿ ಅವನ್ನು ದಕ್ಷಿಣದ ಸಂಗೀತ ಗಾರರು ಸರಿಯಾಗಿ ಹಾಡಿ ಸಮರ್ಥರಾಗಲು ಕಾರಣರಾದರು. ಅಂತೆಯೇ ಅದೇ ಕಾಲದಲ್ಲಿ ಇದ್ದ ಕಂಚಿ ಕಾಮಾಕ್ಷಿಯ ಭಕ್ತರಾದ ಶ್ಯಾಮಾಶಾಸ್ತ್ರಿಗಳು ತೆಲುಗಿನಲ್ಲಿ ಸುಮಾರು ೩೦೦ ಕೀರ್ತನೆ ಗಳನ್ನು ರಚಿಸಿದರು. ಈ ಮೂವರು ಸಂತರೂ ತಿರುವಾ ರೂರಿನಲ್ಲಿಯೇ ಜನ್ಮತಾಳಿದುದು ಒಂದು ವಿಶೇಷವೇ. ಅವರ ಕೀರ್ತನೆಗಳು ಭಕ್ತಿ ಮತ್ತು ಶರಣಾಗತಿಯ ಭಾವಗಳಿಂದ ಕೇಳು ಗರ ಮನಸ್ಸನ್ನು ಮಿಡಿಯುತ್ತವೆ. ಹೀಗೆ ೧೮ನೆ ಶತಮಾನದ ಈ ವಾಗ್ಗೇಯಕಾರರು ತಮ್ಮ ಕೀರ್ತನೆಗಳು ಮತ್ತು ಸಂಗೀತದಿಂದ ಪಾಮರ ರಂಜನೆಯೊಂದಿಗೆ ಭಕ್ತಿ ಸಾಧನವನ್ನು ನೀಡಿದ್ದಾರೆ.

### ರಾಗಭಾವ-ಸಾಹಿತ್ಯಭಾವ

ಹಿಂದೂಸ್ತಾನಿ ಸಂಗೀತದಲ್ಲಿ ರಾಗಭಾವ ಮುಖ್ಯ, ಕರ್ನಾಟಕ ಸಂಗೀತದಲ್ಲಿ ಸಾಹಿತ್ಯಭಾವ ಮುಖ್ಯ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದರೂ, ಇವರೆಡು ಪದ್ಧತಿಗಳಲ್ಲೂ ಎರಡು ಭಾವಗಳೂ ಮುಖ್ಯವಾಗಿವೆ. ರಾಗಭಾವ ಮತ್ತು ಸಾಹಿತ್ಯಭಾವಗಳು ಸಾಮರಸ್ಯದಿಂದ ಮಿಳಿತವಾದಾಗಲೇ ಭಾವಪೂರ್ಣ ಸಂಗೀತ ಹೊರ ಹೊಮ್ಮುವುದು. ಇವೆರಡೂ ಮನಸ್ಸಿಗೆ ಎರಡು ಕಣ್ಣುಗಳಂತೆ ರಸಾನಂದದ ಅನುಭೂತಿಯನ್ನು ನೀಡುತ್ತವೆ. ಹಿಂದೂಸ್ತಾನಿ ಪದ್ಧತಿಯಲ್ಲಿ ಹಾಡಿನ ಒಂದೆರಡು ಚರಣಗಳನ್ನೇ ಬಳಸಿಕೊಂಡು ರಾಗಗಳನ್ನು ವಿಸ್ತರಿಸುತ್ತಾರೆ ಎಂಬ ಮಾತು ಆಗಾಗ ಕೇಳಿಬರುತ್ತದೆ. ಇದು ಕರ್ನಾಟಕ ಸಂಗೀತದಲ್ಲಿಯೂ ರಾಗ-ತಾನ-ಪಲ್ಲವಿ ಎಂಬುದಾಗಿ ಇದೆ. ಗೀತೆ, ಭಜನೆ, ತಿಲ್ಲಾನ, ದಾಸರ ಪದ ಎಂಬುವು ಎರಡೂ ಪದ್ಧತಿಗಳಲ್ಲಿವೆ. ಪಲ್ಲವಿ ವಿದ್ವಾಂಸರಂತೆ ರಾಗಗಳನ್ನು ವಿಸ್ತಾರವಾಗಿ ನುಡಿಸುತ್ತಿದ್ದ ವೇಣುವಾದನ ಪಟು, ಕೀರ್ತಿಶೇಷ ಟಿ.ಆರ್. ಮಹಾಲಿಂಗಂ ಅವರು ಉತ್ತರ ಭಾರತದಲ್ಲಿ ಜನಪ್ರಿಯರಾಗಿದ್ದರು. ಸ್ಥೂಲಕಾಯದ, ಹುರಿಮೀಸೆ ಬಿಟ್ಟಿದ್ದ, ನವಿರಾದ ಕಂಠದಿಂದ ಹಾಡುತ್ತಿದ್ದ, ಪಟಿಯಾಲ ಘರಾಣೆಯ ಉಸ್ತಾದ್ ಬಡೆ ಗುಲಾಂ ಅಲಿಖಾನರು ದಕ್ಷಿಣ ದೇಶದಲ್ಲಿ ಜನಪ್ರಿಯರಾಗಿದ್ದು ಅನೇಕ ಕರ್ನಾಟಕ ಸಂಗೀತ ವಿದ್ವಾಂಸರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರ ಟ್ರಂಪ್ ಕಾರ್ಡ್ ಎಂದು ಕರೆಯಲಾಗುತ್ತಿದ್ದ ಹರಿ ಓಂ ತತ್ ಸತ್ ಮಹಾ ಮಂತ್ರ ಹೈ ಎಂಬ ಪಹಾಡಿ ರಾಗದ ಹಾಡು ಕೇಳುಗರನ್ನು ಅದರ ಭಾವದಲ್ಲಿ ಮುಳುಗಿಸಿ ಬಿಡುತ್ತಿತ್ತು. ಹಾಗೆಯೇ ಕರ್ನಾಟಕದ ಹೆಸರಾಂತ ಹಿಂದೂಸ್ತಾನಿ ಗಾಯಕರಾದ ಕೀರ್ತಿಶೇಷ ಮಲ್ಲಿಕಾರ್ಜುನ ಮನ್ಸೂರರು ಅಕ್ಕ ಕೇಳವ್ವ, ಶಿಶುವಿನಹಾಳ ಶರೀಫ಼ ಸಾಹೇಬರ ತೇರನೆಳೆಯುತಾರ ತಂಗಿ, ಈಗಲೋ ಇನ್ನಾವಗಲೋ ಎಂಬ ದಾಸರ ಪದಗಳನ್ನು ಹಾಡಿದಾಗ ಅವುಗಳ ಭಾವದಲ್ಲಿ ತಲ್ಲೀನರಾದ ಶ್ರೋತೃಗಳಿಗೆ ಇವರು ಮಹಾನ್ ಶಾಸ್ತ್ರೀಯ ಸಂಗೀತಗಾರರೆಂಬುದು ಮರೆತು ಹೋಗುತ್ತಿತ್ತು!

### ರಾಗಭಾವ: ರೋಮಾಂಚಕ ಘಟನೆ

ಪಂಡಿತ ವಿಷ್ಣು ದಿಗಂಬರ್ ಪಳೂಸ್ಕರ್ ಅವರ ಶಿಷ್ಯರಾದ ಓಂಕಾರ್‌ನಾಥ್ ಠಾಕೂರ್ ಅವರು ಬಲಿಷ್ಠರಾಗಿ ಬ್ರಹ್ಮಚಾರಿಗಳಾಗಿದ್ದರು, ಸಾಹಸ ಪ್ರಿಯರು, ನೀಳವಾಗಿ ಕೂದಲು ಬಿಟ್ಟಿದ್ದ ಅವರು ಪ್ರವಾದಿಯಂತೆ ಕಾಣುತ್ತಿದ್ದರು. ಅವರ ಧ್ವನಿ ಆಕ್ರಂದನದಂತೆ ಆಳವಾಗಿ ಗಂಭೀರವಾಗಿತ್ತು. ವಿಶ್ವಸಂಗ್ರಾಮದ ಕಾಲ. ಇಟಲಿಯ ಸರ್ವಾಧಿಕಾರಿಯಾಗಿದ್ದ ಮುಸೋಲಿನಿಯನ್ನು ಭೇಟಿ ಮಾಡಬೇಕೆಂಬ ಹುಚ್ಚು ಆಸೆ ಇವರ ಮನದಲ್ಲಿ ಎದ್ದಿತು. ಇಟಲಿಗೆ ಹೋದರು. ಕಾವಲಿದ್ದ ಸೈನಿಕರು ಇವರನ್ನು ತಡೆದರು. ಪ್ರಾಣದ ಮೇಲೆ ಆಸೆಯಿದ್ದರೆ ಹಿಂತಿರುಗಿ ಹೋಗಿ ಎಂದರು. ಮರಣಕ್ಕಂಜದ ಇವರು, ಭಾರತದಿಂದ ಸಂಗೀತಗಾರನೊಬ್ಬ ಮಹಾದಂಡನಾಯಕರ ಮುಂದೆ ಹಾಡಲು ಬಂದಿರುವನು. ಈ ಸಂದೇಶವನ್ನು ಅವರಿಗೆ ತಲುಪಿಸಿ ಎಂದರು. ಯುದ್ಧದ ಕಾಲದಲ್ಲಿ ಸಂಗೀತ ಕೇಳಲಾಗುವುದೆ? ವಿಚಿತ್ರ ವೇಷದ ವ್ಯಕ್ತಿಯ ವಿಚಿತ್ರ ಉದ್ದೇಶವನ್ನು ಗುಹೆಯಲ್ಲಿದ್ದ ದಂಡನಾಯಕರಿಗೆ ತಿಳಿಸಲಾಯಿತು. ಹಗಲು, ರಾತ್ರಿ ಒಂದು ವಾರ ಓಂಕಾರನಾಥರು ಹೊರಗೆ ಕಾಯ ಬೇಕಾಯಿತು! ನಂತರ ಏಳು ಸುತ್ತಿನ ಸುರಕ್ಷಾಪಡೆಯ ಸೈನಿಕರು ಇವರನ್ನು ಪರೀಕ್ಷಿಸಿ ಗುಹೆಯೊಳಕ್ಕೆ ಕರೆದೊಯ್ದು ಮುಸೋಲಿನಿಯ ಮುಂದೆ ನಿಲ್ಲಿಸಿದರು. ನಿರ್ದಯ ನರಸಂಹಾರಕನಾದ ಇವನ ಹೆಸರನ್ನು ಕೇಳಿದರೆ ಜನ ನಡುಗುವರು, ಆದರೆ ಈತ ದೂರದೇಶದಿಂದ ಬಂದು ನಿರ್ಭೀತನಾಗಿ ತನ್ನ ಮುಂದೆ ನಿಂತಿರುವುದನ್ನು ಕಂಡ ದಂಡನಾಯಕ ಇವರನ್ನು ಏನು ಬೇಕಾಗಿದೆ ಎಂದು ಕೇಳಿದ. ನಿಮ್ಮ ಮುಂದೆ ಹಾಡಬೇಕೆಂದರು. ನನಗೆ ಕೋಪ ಬರಿಸುವಂತೆ ಹಾಡಬಲ್ಲೆಯಾ ಎಂದು ಮುಸೋಲಿನಿ ಕೇಳಿದ. ಒಂದು ವಾರದಿಂದ ಊಟವಿಲ್ಲದೆ, ಮಲಿನ ವಸ್ತ್ರವನ್ನೇ ಧರಿಸಿದ್ದ ಓಂಕಾರನಾಥರು ನಿಂತಲ್ಲಿಯೇ ಕೆಲವು ಗಂಟೆ ರಾಗವೊಂದನ್ನು ಹಾಡಿದರು. ಕೇಳುತ್ತ ಕೇಳುತ್ತ ಕೋಪದಿಂದ ಕಿಡಿಕಾರುವ ಕಣ್ಣುಗಳಿಂದ ನೋಡುತ್ತ ಮುಸೋಲಿನಿ ಇವರನ್ನು ಕೊಲ್ಲಲು ಬಂದೂಕವನ್ನು ತೆಗೆದುಕೊಂಡ. ಹತ್ತಿರವಿದ್ದ ಸಿಪಾಯಿಗಳು ಮುಸೋಲಿನಿಯನ್ನು ತಡೆ



ಹಿಡಿದು ಗಾಯಕನನ್ನು ಕಾಪಾಡಿದರು. ಈಗ ಶಾಂತಭಾವವನ್ನು ನೀಡುವ ರಾಗ ಹಾಡು ಎಂದು ಮುಸೊಲಿನಿ ಆಜ್ಞಾಪಿಸಿದ. ಶಾಂತಭಾವದ ರಾಗವೊಂದನ್ನು ಓಂಕಾರನಾಥರು ಕೆಲವು ಗಂಟೆ ಹಾಡಿದರು. ದಂಡನಾಯಕ ಶಾಂತನಾದ. ಅಷ್ಟು ಹೊತ್ತಿಗೆ ಈತನ ಮನಸ್ಸು ಮೆತ್ತಗಾಗಿತ್ತು. ಗಾಯಕರಲ್ಲಿ ಗೌರವ ಮೂಡಿತ್ತು. ನಂತರ ಶೋಕರಸವನ್ನು ಸ್ಫುರಿಸುವ ರಾಗವನ್ನು ಹಾಡುವಂತೆ ಕೇಳಿಕೊಂಡ. ಪಂಡಿತರು ಪ್ರಾರಂಭಿಸಿದರು. ರಾಗ ಮೇರು ಸ್ಥಿತಿಯನ್ನು ಮುಟ್ಟಿದಾಗ ಸರ್ವಾಧಿಕಾರಿ ದುಃಖತಾಡಿತ ಹೃದಯದಿಂದ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ಹಾಡುವುದನ್ನು ನಿಲ್ಲಿಸಬೇಕಾಯಿತು. ಸ್ವಲ್ಪ ಸಮಯದ ನಂತರ, ಮುಸೊಲಿನಿ ಒಳಗೆ ಹೋಗಿ ತನ್ನ ಪಿಟೀಲನ್ನು ಹಿಡಿದುಕೊಂಡು ಬಂದ. ಆಗಲೆ ಠಾಕೂರರಿಗೆ ಈತನೂ ಸಂಗೀತಗಾರನೆಂದು ತಿಳಿದದ್ದು. ಆತನ ಪಿಟೀಲುವಾದನ ಪ್ರಾರಂಭವಾಯಿತು. ಅಳುವ, ಶಾಂತರಾಗುವ, ಕ್ರುದ್ಧರಾಗುವ ಸರದಿ ಓಂಕಾರನಾಥರದಾಯಿತು. ರಾಗ ಭಾವದಲ್ಲಿ ಇಬ್ಬರೂ ಮುಳುಗಿ ತೇಲಾಡಿ ಒಂದೆರಡು ದಿನಗಳು ಗುಪ್ತ ಗುಹೆಯಲ್ಲಿ ಕಳೆದ ಬಳಿಕ, ಮುಸೊಲಿನಿ ಓಂಕಾರನಾಥರನ್ನು ಇಟಲಿಯ ವಿಶ್ವವಿದ್ಯಾನಿಲಯದಲ್ಲಿ ಸಂಗೀತದ ಮುಖ್ಯಸ್ಥರಾಗಿ ಇರಬೇಕೆಂದು ಕೇಳಿಕೊಂಡನು. ತಾವು ಬಂದ ಉದ್ದೇಶ ನೆರವೇರಿತೆಂದು ತಿಳಿಸಿ ಭಾರತಕ್ಕೆ ಹಿಂದಿರುಗಿದರು. ನಂತರ ಕೀಲ್ ವಿಶ್ವವಿದ್ಯಾನಿಲಯದಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಓಂಕಾರನಾಥ ಠಾಕೂರರನ್ನು ನೇಮಿಸಲಾಗಿದೆ ಎಂಬ ಪತ್ರ ಬಂದಿತು. ಓಂಕಾರನಾಥರು ಅದನ್ನು ವಿನಯದಿಂದ ತಿರಸ್ಕರಿಸಿದರು. ಹೀಗೆ ಸರ್ವಾಧಿಕಾರಿಯೂ ಸಂಗೀತಕ್ಕೆ ಬಲಿಯಾದ!

### ವಾದನ ಕಲೆ

ಗಾಯನಕಲೆಯೊಂದಿಗೆ ವಾದನಕಲೆ ಅಷ್ಟೇ ವೈಭವಪೂರ್ಣವಾಗಿ ಬೆಳೆದುಬಂದಿದೆ ನಮ್ಮ ದೇಶದಲ್ಲಿ. ನಮ್ಮ ಸಂಗೀತ ಪದ್ಧತಿಯಲ್ಲಿ, ವಾದ್ಯಸಂಗೀತ ಪರಿಪೂರ್ಣವಾದುದು. ಯಶಸ್ವಿ ಗಾಯನದ ಹಿಂದೆ ವಾದ್ಯಸಂಗೀತ ಇರುವುದು. ಗಾಯನಕ್ಕೆ ಪೂರಕವಾಗಿರುವುದಲ್ಲದೆ ಅದಕ್ಕೆ ಸ್ವತಂತ್ರ ಸ್ಥಾನವಿದೆ. ಬೆಂಕಿ ಧಗ್ಗನೆ ಹೊತ್ತಿಕೊಳ್ಳುವುದು, ಚಟಪಟಗುಟ್ಟುತ್ತಾ ಉರಿಯುವುದು, ಬಿರುಗಾಳಿ, ಮಳೆಯ ಆರ್ಭಟ, ಜಲಪಾತದಲಿ ನೀರು ದುಮಿಕ್ಕುವುದು, ಜನ ಭಯಭೀತರಾಗಿ ಓಡುವುದು, ಮನೋ ಆಘಾತದಿಂದ ವ್ಯಕ್ತಿ ಕುಸಿದು ಬೀಳುವುದು ಮುಂತಾದ, ಗಾಯನ ಮಾಡಲಾಗದ ಅನುಕರಣ ನಾದಗಳನ್ನು ವಾದ್ಯಗಳು ಹೊರಡಿಸಬಲ್ಲವು. ಆದುದರಿಂದಲೇ ನಾಟ್ಯ ಮತ್ತು ನಾಟಕಗಳಲ್ಲಿ ಹಿನ್ನೆಲೆ ಸಂಗೀತಕ್ಕೆ ವಾದ್ಯಗಳನ್ನು ಉಪಯೋಗಿಸುವುದು. ವಾದ್ಯಮೇಳಗಳು ಉತ್ಪತ್ತಿ ಮಾಡುವ ಸಂಗೀತ ತರಂಗಗಳನ್ನು ಬಹು ಗಾಯಕರ ಒಕ್ಕೊರಲು ಮಾಡಲಾಗದು. ವಾದ್ಯಸಂಗೀತದಲ್ಲಿ ಸಾಹಿತ್ಯ ಭಾವವನ್ನೂ ಹೃದಯಸ್ಪರ್ಶಿಯಾಗುವಂತೆ ಶ್ರೋತೃಗಳಿಗೆ ಮುಟ್ಟಿಸಬಲ್ಲ ಟಿ.ಚೌಡಯ್ಯ, ದ್ವಾರಂ ವೆಂಕಟಸ್ವಾಮಿ ನಾಯಿಡು, ಪನ್ನಲಾಲ್ ಘೋಷ್ ಅವರಂತಹ ಮಹಾನ್ ವಾದಕರು ಜನ್ಮತಾಳಿದ ದೇಶ ನಮ್ಮದು.



ಸಂಗೀತ ಜ್ಞಾನಮು ಭಕ್ತಿ ವಿನಾ ಎಂದು ತ್ಯಾಗರಾಜರು ಹಾಡಿದಂತೆ, ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ಕೇಳನೋ ಹರಿ ಎಂದು ಪುರಂದರ ದಾಸರು ಹಾಡಿದಂತೆ, ಸಂಗೀತ ನಮ್ಮ ಸಂಸ್ಕೃತಿಯಲ್ಲಿ ಮುಖ್ಯವಾಗಿ ಭಕ್ತಿಸಾಧನ.

### ಲಲಿತ ಸಂಗೀತ ಮತ್ತು ಜನಪದ ಸಂಗೀತ

ಶಾಸ್ತ್ರೀಯ ಸಂಗೀತವನ್ನು ಬಿಟ್ಟರೆ ಅತ್ಯಂತ ಜನಪ್ರಿಯವಾಗಿರುವುದೇ ಲಲಿತ ಸಂಗೀತ. ಇದರಲ್ಲಿ ರಾಗ ಸ್ವರಗಳ ಅಬ್ಬರವಿಲ್ಲ. ಪ್ರಕೃತಿ ವರ್ಣನೆ, ಸಾಮಾಜಿಕ ಸಂಬಂಧಗಳು, ಮಾನವೀಯ ಭಾವನೆಗಳು, ಅಲ್ಲದೆ ನವರಸಗಳೂ ಇದರ ಸಾಹಿತ್ಯದಲ್ಲಿ



ಸೇರಿವೆ. ಭಾವಗೀತೆಯ ಕವಿಗಳು ಎಲ್ಲಾ ಭಾರತೀಯ ಭಾಷೆಗಳಲ್ಲಿಯೂ ಲಲಿತ ಸಂಗೀತಕ್ಕೆ ಅನುವಾಗುವ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಲಲಿತ ಸಂಗೀತವನ್ನು ಲೋಕಸಂಗೀತವೆಂದೂ ಕರೆಯುತ್ತಾರೆ. ಇದರ ಆಧಾರ ಶಾಸ್ತ್ರೀಯ ಸಂಗೀತವಾಗಿದ್ದರೂ ಶಾಸ್ತ್ರದ ನಿಬಂಧನೆಗಳನ್ನು ಸಡಿಲಗೊಳಿಸಿ ಎಲ್ಲರೂ ಸುಲಭವಾಗಿ ಹಾಡುವಂತೆ ಮಾಡಲಾಗಿದೆ. ಅತ್ಯಂತ ಪ್ರಾಚೀನವೂ ಕಷ್ಟಸಾಧ್ಯವೂ ಆದ ಧ್ರುಪದ ಗಾಯನದ ಹೆಸರಾಂತ ಗಾಯಕರಾದ ಕೀರ್ತಿಶೇಷ ಪಂಡಿತ ಸಿಯಾರಾಮ್ ತಿವಾರಿಯವರು ದೂರದರ್ಶನದ ಸಂದರ್ಶನವೊಂದರಲ್ಲಿ ಸಂದರ್ಶಕರ ವಿನಂತಿಯಂತೆ ಲೋಕಗೀತೆಯೊಂದನ್ನು ಹಾಡಿದರು. ಲಲಿತಸಂಗೀತದ ನಿಷ್ಣಾ

ತರೇ ಹಾಡಿದಂತಿತ್ತು!

ಜನಪದ ಸಂಗೀತ ಗ್ರಾಮಾಂತರ ಪ್ರದೇಶಗಳ ಜನಜೀವನದಲ್ಲಿ ಹಾಸುಹೊಕ್ಕಾಗಿದೆ. ನಮ್ಮ ಸಂಸ್ಕೃತಿ ಜೀವಂತವಾಗಿರುವುದೇ ಗ್ರಾಮಗಳಲ್ಲಿ, ಉಳಿದಿರುವುದೇ ಅವರಿಂದ. ಅವರ ನಿತ್ಯ ಜೀವನ ಸಮಾಜಧರ್ಮ ನೀತಿ ನಡವಳಿಕೆ ದುಡಿಮೆ ಕಷ್ಟ-ಸುಖ ಎಲ್ಲಾ ಮುಖಗಳನ್ನೂ ಬಿಂಬಿಸುವ ಹಾಡುಗಳು ತಲೆಮಾರುಗಳಿಂದ, ಕಾಗದ ಇಲ್ಲದಿದ್ದ ಕಾಲದಿಂದ ಉಳಿದು ಬಂದಿವೆ. ಎಷ್ಟೋ ಲುಪ್ತವಾಗಿದ್ದರೂ ಇಂದಿಗೆ ಲಬ್ಧವಿರುವುದನ್ನು ಕಲೆ ಹಾಕಲೂ ಸಮಯ, ಪ್ರಯತ್ನ ಸಾಲದಾಗಿರುವಷ್ಟು ವಿಪುಲವಾಗಿ ವೈವಿಧ್ಯಮಯವಾಗಿ ಇದೆ. ಇದರಿಂದ ಅನೇಕ ಜನಪದ ವಾದ್ಯಗಳೂ ಸೃಷ್ಟಿಯಾದುವು. ಹರಿಕಥೆ, ಬಯಲಾಟ, ಕೀರ್ತನೆ ಮುಂತಾದವುಗಳಿಗೆ ಬೇಕಾದ ಸಂಗೀತವೂ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಜೀವಂತವಾಗಿವೆ.

### ನಾಟ್ಯ

ಕಾವ್ಯ ಮತ್ತು ಸಂಗೀತ — ಇವೆರಡನ್ನೂ ಒಳಗೊಂಡ ಕಲೆ ಇದು, ಶ್ರವ್ಯಕಾವ್ಯದ ಭಾವವನ್ನು ಸಂಗೀತ ವರ್ಧಿಸುವುದು. ಅದನ್ನು ಇನ್ನೂ ಹೆಚ್ಚು ಸಾಂದ್ರವಾಗಿ ಅಧಿಕಗೊಳಿಸುವುದು ನಾಟ್ಯ. ಸಂಗೀತ ಶ್ರವ್ಯಕಾವ್ಯವಾದರೆ, ನಾಟ್ಯ ದೃಶ್ಯಕಾವ್ಯ. ಅಭಿನಯ, ಕಾವ್ಯ ಮತ್ತು ಸಂಗೀತದೊಂದಿಗೆ ಸೇರಿ ನಾಟ್ಯವೆಂಬ ತ್ರಿವೇಣಿ ರೂಪತಾಳುತ್ತದೆ. ಗೆಜ್ಜೆಯ ನಾದ ತಾಳದ ನಿನಾದ



ದೊಂದಿಗೆ ನಮ್ಮ ಹೃದಯದಲ್ಲಿ ಅನುರಣಿತವಾಗುವುದು. ನಟುವಾಂಗ, ಭಾವಾಭಿನಯ, ಮುಖಮುದ್ರೆ, ಹಸ್ತಮುದ್ರೆ ಇವುಗಳಿಂದ ಕಥಾಪ್ರಸಂಗ, ಸಂವಾದ ಮುಂತಾದುವನ್ನು ಅಭಿನಯಿಸುವುದರಿಂದ ಪಾತ್ರಗಳು ಜೀವಂತವಾಗುವುವು. ಮಹಾಭಾರತ, ಭಾಗವತ, ರಾಮಾಯಣಗಳು ನಮ್ಮ ಕಣ್ಣೆದುರಿಗೆ ಮರುಸೃಷ್ಟಿಯಾಗುವುವು. ನಮ್ಮಲ್ಲಿ ಭರತನಾಟ್ಯ, ಕೂಚುಪುಡಿ, ಮೋಹಿನಿಯಾಟ್ಟಂ, ಒಡಿಸ್ಸಿ, ಕಥಕ್, ಮಣಿಪುರಿ ಮುಂತಾದ ಅನೇಕ ನಾಟ್ಯ ಶೈಲಿಗಳಿವೆ. ಇವುಗಳಲ್ಲಿ ವಿವಿಧತೆ ಮತ್ತು ಅವರದೇ ಆದ ವಿಶಿಷ್ಟತೆ ಇದ್ದರೂ ಇವುಗಳ ಕಥಾವಸ್ತು ನಮ್ಮ ಪುರಾಣ, ಭಕ್ತರ ಕಥೆಗಳು, ಮತ್ತು ಭಕ್ತಿಗೀತೆಗಳು. ನಮ್ಮ ಧರ್ಮದ ತತ್ತ್ವಗಳನ್ನು ಸುಲಭವಾಗಿ ಸರಳವಾಗಿ ಕಥೆಯ ರೂಪದಲ್ಲಿ ತಿಳಿಸಲೆಂದೇ ಪುರಾಣಗಳು ರಚಿತವಾಗಿರುವುದು. ಅವತಾರ ಪುರುಷರ ಲೀಲೆ, ಭಕ್ತರ ಜೀವನ, ಭಕ್ತಿಸ್ತೋತ್ರಗಳ ಸ್ತೋತ್ರ ಇವನ್ನೆಲ್ಲಾ ನೋಡುತ್ತಾ ಕೇಳುತ್ತಾ ಹೃದಯದಲ್ಲಿ ರಸಾನಂದವನ್ನು ಅನುಭವಿಸುತ್ತಾ ನಮ್ಮ ಜೀವನದಲ್ಲಿ ಧಾರ್ಮಿಕ ಸಂಪತ್ತನ್ನು ವೃದ್ಧಿಗೊಳಿಸಿಕೊಳ್ಳಲು ಅನುಕೂಲವಾಗುವಂತೆ ರಚಿತವಾಗಿರುವ ಈ ಸಂಕೀರ್ಣ ನಾಟ್ಯಕಲೆ ಅಭಿನಯ ವಿಶಾರದರಿಂದ ವಿಕಾಸವಾಗುತ್ತಾ ಬರುತ್ತಿದೆ.

### ವಾಸ್ತುಶಿಲ್ಪ ಮತ್ತು ಪ್ರತಿಮಾ ಶಿಲ್ಪ

ವಾಸ್ತು ಶಿಲ್ಪದಲ್ಲಿ ಎರಡು ಬಗೆ. ಗೃಹ ಶಿಲ್ಪ ಮತ್ತು ದೇವಾಲಯ ಶಿಲ್ಪ. ಇವೆರಡಕ್ಕೂ ಪ್ರತ್ಯೇಕವಾದ ವಾಸ್ತುಶಾಸ್ತ್ರವಿದೆ. ನಾವು ವಾಸಿಸಬೇಕಾದ ಮನೆಯಲ್ಲಿ ಯಾವ ಕೋಣೆ ಎಲ್ಲಿರಬೇಕು ಎಂಬುದು ಅದಕ್ಕೆ ಸಂಬಂಧಪಟ್ಟ ಗೃಹ ಮತ್ತು ದಿಗ್ದೇವತೆಗೆ ಅನುಗುಣವಾಗಿರಬೇಕು. ಇದರಲ್ಲಿಯೂ ಗೃಹ ಅಥವಾ ದೇವತೆಗಳ ಪುರಸ್ಕಾರ ಇದೆ. ಇದನ್ನು ಈಗಲೂ ನಮ್ಮ ದೇಶದಲ್ಲಿ ಅನುಸರಿಸಲಾಗುತ್ತಿದೆ. ಮನೆಯಲ್ಲಿ ದೇವರನ್ನು ಪೂಜಿಸುವುದರಿಂದ ಮನೆಯನ್ನು ಪೂಜ್ಯ ದೃಷ್ಟಿಯಿಂದ ನಾವು ನೋಡುತ್ತೇವೆ. ಗೃಹಪ್ರವೇಶ ಎಂಬುದು ಭಗವಂತ ನಮ್ಮ ಗೃಹವನ್ನು ಪ್ರವೇಶಿಸುವ ದಿವ್ಯ ಕಾರ್ಯವಾಗಿದೆ.

ದೇವಸ್ಥಾನ ದೇವರ ಪೂಜೆಗೆ ಮೀಸಲಾದ ಸ್ಥಳವಾದುದರಿಂದ ಅದರ ನಿರ್ಮಾಣ ಎಲ್ಲಾ ಹಂತದಲ್ಲಿಯೂ ವಾಸ್ತುಶಿಲ್ಪ ಶಾಸ್ತ್ರದ ಪ್ರಕಾರ ಅತ್ಯಂತ ಪವಿತ್ರ ರೀತಿಯಲ್ಲಿ ಸಾಗುತ್ತದೆ. ಕರ್ಕಾಟಕ ಸಂಕ್ರಾಂತಿ ವೃತ್ತ ನಮ್ಮ ದೇಶದ ಮಧ್ಯಭಾಗದಲ್ಲಿ ಹಾದು ಹೋಗುವುದರಿಂದ ದಕ್ಷಿಣ ಭಾರತ ಉಷ್ಣವಲಯದಲ್ಲೂ ಉತ್ತರ ಭಾರತ ಸಮಶೀತೋಷ್ಣವಲಯದಲ್ಲಿಯೂ ಇದ್ದು ವಾಯು ಗುಣದಲ್ಲಿ, ಆಹಾರ ಉಡುಪು ಕಟ್ಟಡ ಮರ, ಮಣ್ಣು, ಶಿಲೆ, ಖನಿಜ ಮುಂತಾದುವುಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ. ಉತ್ತರ ಮತ್ತು ದಕ್ಷಿಣದ ದೇವಸ್ಥಾನಗಳಲ್ಲಿ ನಿರ್ಮಾಣಕ್ಕೆ ಉಪಯೋಗಿಸುವ ವಸ್ತುಗಳಲ್ಲಿ - ಮರ, ಲೋಹ, ಶಿಲೆ, ಮಣ್ಣು ಇವುಗಳಲ್ಲಿ ವೈವಿಧ್ಯತೆ ಇದೆ. ಹಾಗೆಯೇ ಮೈದಾನ ಬೆಟ್ಟಗುಡ್ಡ ನದಿತೀರ ಪರ್ವತಪ್ರದೇಶ ಕಾಡು ಮುಂತಾದ ಪ್ರದೇಶಗಳಲ್ಲಿ ಕಾಣಬರುವ ದೇವಸ್ಥಾನಗಳ ಶೈಲಿಯೂ ಕೂಡ. ನಾಗರ ಶೈಲಿ ಉತ್ತರ ಭಾರ ತದ ದೇವಸ್ಥಾನಗಳಲ್ಲಿ ಮತ್ತು ದ್ರಾವಿಡ ಶೈಲಿ ದಕ್ಷಿಣ ಭಾರತದಲ್ಲಿ ಕಂಡು ಬರುತ್ತವೆ. ಇವೆರಡರ ಮಿಶ್ರಣ ವೇಸರ ಶೈಲಿ. ಈ ಶೈಲಿ ಗಳಲ್ಲಿ ನಮ್ಮ ದೇಶದ ಎಲ್ಲಾ ಭಾಗಗಳಲ್ಲೂ



ಸುಂದರ, ಅಮೋಘ ದೇವಾಲಯಗಳು ನಿರ್ಮಾಣವಾಗಿವೆ.

### ದೇವಾಲಯ

ಪ್ರಕೃತಿ ಸೌಂದರ್ಯವನ್ನು ಕಂಡ ಕಡೆ ನಮ್ಮವರು ದೇವಾಲಯಗಳನ್ನು ನಿರ್ಮಿಸಿರುವರು. ಪ್ರಕೃತಿ ಸೌಂದರ್ಯದ ಹಿಂದೆ ಇರುವ ಕೈವಾಡವನ್ನು ಕಂಡುಹಿಡಿಯುವ ಸಾಹಸವನ್ನು ಕೈಕೊಂಡ ಇವರೇ ಋಷಿಗಳೆನಿಸಿಕೊಂಡವರು. ಅವರಿಂದಲೇ ಉಪನಿಷತ್ತುಗಳು ಬಂದುದು. ನಮ್ಮದು ವೈದಿಕ ಧರ್ಮ. ಹೇಗೆ ಒಂದು ದೃಶ್ಯವನ್ನು ಹಲವು ಕೋನಗಳಿಂದ ಹಲವು ಸ್ತರಗಳಿಂದ ನೋಡಬಹುದೊ ಹಾಗೆ ನಮ್ಮ ಋಷಿಗಳು ಸತ್ಯ ಸಾಕ್ಷಾತ್ಕಾರವನ್ನು ಹಲವು ಸ್ತರಗಳಲ್ಲಿ ಮಾಡಿಕೊಂಡರು. ಪ್ರಾಚ್ಯ ಸಂಸ್ಕೃತಿಯ ಸಂಶೋಧಕರ ಪ್ರಕಾರ ವೇದಗಳ ಕಾಲದಲ್ಲಿ ದೇವಸ್ಥಾನಗಳು ಇರಲಿಲ್ಲ. ಯಾವ ಕಾಲದಲ್ಲಿ ಅದು ಪ್ರಾರಂಭವಾಯಿತೊ ಗೊತ್ತಿಲ್ಲ. ಅವರಿಗೆ ತಿಳಿದಂತೆ ಕ್ರಿ.ಶ. ಮೂರನೆ ಶತಮಾನದಿಂದ ಉಳಿದು ಬಂದಿರುವ ದೇವಸ್ಥಾನಗಳ ಉಲ್ಲೇಖವಿದೆ. ನಮ್ಮ ಋಷಿಗಳು ಸಾಕ್ಷಾತ್ಕಾರದ ಉತ್ತುಂಗ ಶಿಖರವನ್ನು ಮುಟ್ಟಿದ್ದರೂ ಜನಸಾಮಾನ್ಯರು ಅವರಿಗೆ ಸರಳವಾದ ಪ್ರಿಯವಾದ ಭಕ್ತಿ ಮಾರ್ಗದಿಂದ ಭಗವಂತನೆಡೆಗೆ ಪಯಣಿಸಲಿ ಎಂಬ ಲೋಕ ಕಲ್ಯಾಣದ ದೃಷ್ಟಿಯಿಂದ ದೇವಸ್ಥಾನಗಳ ನಿರ್ಮಾಣಕ್ಕೆ ತೊಡಗಿರಬಹುದು. ದೇವಸ್ಥಾನದ ಭಾಗಗಳು ಸಾಂಕೇತಿಕವಾಗಿ ಮನುಷ್ಯನ ದೇಹದ ಭಾಗಗಳು, ವಿರಾಟ್ ಪುರುಷನ ದೇಹದ ಭಾಗಗಳು ಮತ್ತು ಆಧ್ಯಾತ್ಮಿಕ ಭೂಮಿಕೆಗಳು ಅಥವಾ ಷಟ್‌ಚಕ್ರಗಳನ್ನು ಪ್ರತಿನಿಧಿಸುತ್ತವೆ. ಹಾಗೂ ದೇವರ ಪೂಜೆ ಅಲ್ಲಿ ವಿಧಿವತ್ತಾಗಿ ಪ್ರತಿನಿತ್ಯವೂ ನಡೆಯುವುದರಿಂದ ದೇವಸ್ಥಾನಕ್ಕೆ ಹೋಗುವ ಭಕ್ತರ ಮನಸ್ಸಿನಲ್ಲಿ ದೇವರ ಭಾವ, ಪವಿತ್ರತೆ ಮತ್ತು ಶಾಂತಿ ತಾನಾಗಿಯೇ ಮೂಡುವುದು. ಆದುದರಿಂದಲೇ ದೇವಸ್ಥಾನಕ್ಕೆ ಹೋಗುವುದು ನಮ್ಮ ಜನರ ನಿತ್ಯಜೀವನದ ಭಾಗವಾಗಿದೆ.

### ಸ್ಥಪತಿ

ದೇವಸ್ಥಾನಕ್ಕೆ ಸೂಕ್ತವಾದ ನಿವೇಶನವನ್ನು ನಿಗದಿ ಮಾಡುವುದರಿಂದ ಪ್ರಾರಂಭಿಸಿ ಅದರ ನಕ್ಷೆಯನ್ನು ತಯಾರಿಸುವುದು ಅದರ ನಿರ್ಮಾಣ, ಮೂಲ ವಿಗ್ರಹವನ್ನು ಕೆತ್ತುವುದು, ಇತರ ಪ್ರತಿಮೆಗಳು ನವಗ್ರಹಗಳು, ಪ್ರಾಕಾರದ ಹೊರಗಿನ ಅಲಂಕರಣ ಅಥವಾ ಕಥೆಗಳ ಪ್ರತಿಮೆಗಳನ್ನು ಕೆತ್ತುವುದು ಮತ್ತು ಕೊನೆಯದಾಗಿ ಪ್ರತಿಷ್ಠಾಪನೆಯ ಸಮಯದಲ್ಲಿ ಪ್ರಾಣಪ್ರತಿಷ್ಠೆಯ ಸಮಯದಲ್ಲಿ ಕಣ್ಣನ್ನು ತೆರೆಸುವುದು – ಇವೆಲ್ಲವನ್ನೂ ಮಾಡುವವರು ಶಿಲ್ಪಿಗಳು ಅಥವಾ ಸ್ಥಪತಿಗಳು. ಪ್ರತಿಮೆಗಳು ಲೋಹದ್ದಾಗಿರಬಹುದು, ಶಿಲೆಯದಾಗಿರಬಹುದು. ಲೋಹಶಿಲ್ಪ ಮತ್ತು ಶಿಲಾಶಿಲ್ಪಗಳನ್ನು ಮಾಡುವ ಕುಶಲಿಗಳು ಪ್ರತ್ಯೇಕವಾಗಿರುವರು. ಇಷ್ಟೇ ಅಲ್ಲದೆ ದೇವರ ಉತ್ಸವಕ್ಕೆ ಬೇಕಾದ ರಥಗಳನ್ನು ತಯಾರು ಮಾಡುವವರೂ ಶಿಲ್ಪಿಗಳೇ. ರಥಗಳ ಅಲಂಕರಣ ಮತ್ತು ಉತ್ಸವ



ಮೂರ್ತಿಗಳನ್ನು ಚಿನ್ನ, ಬೆಳ್ಳಿಗಳಂತಹ ಪ್ರಶಸ್ತ ಲೋಹಗಳಲ್ಲಿ ಕೆತ್ತುವ ಪ್ರತಿಮಾಶಿಲ್ಪಿಗಳು ಇರುವರು.

### ಪ್ರತಿಮಾ ಶಿಲ್ಪ

ಪ್ರತಿಮಾ ಶಿಲ್ಪ–ಸೌಂದರ್ಯದ ಆಧಾರ, ತಾಲಮಾನ. ದೇವತೆಗಳ ಮುಖ ಹೇಗಿರಬೇಕು, ರಾಕ್ಷಸರ ಮುಖ ಹೇಗಿರಬೇಕು ಎಂಬುದು ಅವರ ಮುಖ, ಮೂಗು ಹಣೆ, ಬಾಹು ಮುಂತಾದವುಗಳ ಅಂಗಸೌಷ್ಠವದ ಅಳತೆಯನ್ನು ಅವಲಂಬಿಸಿವೆ. ಈ ವಿವರಗಳು ಶಿಲ್ಪಶಾಸ್ತ್ರದಲ್ಲಿ ಇವೆ. ಶಿಲ್ಪಿಗಳೆಂದರೆ ಕಲ್ಪನೆ, ಊಹೆ, ನಿರ್ಮಾಣ ಇವು ಮೂರರಲ್ಲೂ ಕುಶಲಿಗಳಾಗಿರುವವರು. ನಮ್ಮಲ್ಲಿ ಶಾಸ್ತ್ರಕಾರರು ಋಷಿಗಳು. ಅದಕ್ಕೆ ಪ್ರೇರಕರು ದೇವತೆಗಳು. ವಿಶ್ವಕರ್ಮ, ಮನು, ತ್ವಷ್ಟ – ಇವರೇ ಆ ದೇವತೆಗಳು *(ವಿಷ್ಣು ಸಹಸ್ರನಾಮ, ಶ್ಲೋಕ ೬).* ಶಿಲ್ಪಿಗಳು ಈ ದೇವತೆಗಳ ಉಪಾಸನೆಯಿಂದ ಸೌಂದರ್ಯ ಪ್ರಜ್ಞೆ ಮತ್ತು ಕುಶಲ ಕರ್ಮಪಟುತ್ವವನ್ನು ಪಡೆಯುವರು. ಅಮರ ಶಿಲ್ಪಿಗಳು ನಮ್ಮ ದೇಶದ ಉದ್ದಗಲಕ್ಕೂ ಉಪಾಸನಾಕಲಾಸೌಂದರ್ಯದ ಪರಾಕಾಷ್ಠೆಯನ್ನು ಪ್ರದರ್ಶಿಸಿ ಮರೆಯಾಗಿರುವರು. ಸುಮಾರು ೧೬ ಶತಮಾನಗಳ ಹಿಂದೆ ಎಲ್ಲೋರವೆಂಬ ಪ್ರಾಚೀನ ಗ್ರಾಮದಲ್ಲಿ ಸುಮಾರು ಒಂದೂವರೆ ಮೈಲಿಗಳಷ್ಟು ಉದ್ದವಿರುವ ಗುಡ್ಡಗಳಲ್ಲಿ ೩೩ ಗವಿಗಳನ್ನು ಕೊರೆದು ಅದರಲ್ಲಿ ಕೆತ್ತಿರುವ ಶಿಲ್ಪಗಳು ಇಂದಿಗೂ ವಿಶ್ವದಾದ್ಯಂತ ಕಲಾಯಾತ್ರಿಕರನ್ನು ಮೂಕವಿಸ್ಮಯಗೊಳಿಸುತ್ತಿವೆ.

### ಚಿತ್ರಕಲೆ

ನಮ್ಮ ದೇಶದಲ್ಲಿ ಚಿತ್ರಕಲೆ ಎಂದ ಕೂಡಲೆ ನಮಗೆ ನೆನಪಾಗುವುದು ಅಜಂತಾದ ಗುಹೆಗಳಲ್ಲಿ ಕಲ್ಲಿನ ಗೋಡೆಗಳ ಮೇಲೆ ಬರೆದಿರುವ ಚಿತ್ರಗಳು. ಭಾರತದಲ್ಲಿ ಚಿತ್ರಕಲೆ, ಕಾಗದ ಇಲ್ಲದಿದ್ದ ಪುರಾತನ ಶಿಲಾಯುಗದ ಕಾಲದಿಂದಲೂ ಇದೆ. ಅವುಗಳಿಂದ ಅಂದಿನವರ ಚರಿತ್ರೆ, ಜನಜೀವನ ಆಲೋಚನೆ ಮುಂತಾದು



ಅರಮನೆಗಳಲ್ಲಿ ಚಿತ್ರಗಳಿಂದ ಅಲಂಕೃತವಾದ ಗೋಡೆಗಳುಳ್ಳ ಶಾಲೆಗಳು ಇದ್ದುವೆಂದು ರಾಮಾಯಣ, ಮಹಾಭಾರತ ಮತ್ತು ತ್ರಿಪಿಟಕ ಮುಂತಾದ ಬೌದ್ಧ ಗ್ರಂಥಗಳಿಂದ ತಿಳಿದುಬರುತ್ತದೆ. ವರ್ಣಚಿತ್ರಗಳಿದ್ದ ಬಂಡೆಗಳನ್ನು ನಮ್ಮ ದೇಶದಲ್ಲಿ ಮೊದಲ ಬಾರಿಗೆ ೧೯ನೆ ಶತಮಾನದ ಮಧ್ಯಭಾಗದಲ್ಲಿ ಕಂಡುಹಿಡಿದವರು ಪಾಶ್ಚಾತ್ಯ ಭೂವಿಜ್ಞಾನಿಗಳು. ಚಿತ್ರಕಲೆ ಎಂಬುದು ಕುಂಚ ಪ್ರಪಂಚ ಹಾಗೂ ವರ್ಣಪ್ರಪಂಚ. ಜಲವರ್ಣಚಿತ್ರ, ತೈಲವರ್ಣ ಚಿತ್ರ, ರೇಖಾಚಿತ್ರ ಮುಂತಾದ ಪ್ರಭೇದಗಳಿವೆ. ಇದು ಶಿಲ್ಪಕಲೆಗಿಂತಲೂ ಪ್ರಾಚೀನವಾದುದು. ಪ್ರತಿಮಾಶಿಲ್ಪಕ್ಕೆ, ವಾಸ್ತುಶಿಲ್ಪಕ್ಕೆ ಬೇಕಾದ ಚಿತ್ರ ಮತ್ತು ನಕ್ಷೆಯನ್ನು ಬರೆದು ಕೊಡುವವರು ಚಿತ್ರಕಲಾವಿದರೇ. ಕ್ರಿ.ಶ. ಮೂರನೆಯ ಶತಮಾನದಿಂದ ಒಂದು ಸಾವಿರಕ್ಕೂ ಹೆಚ್ಚು ವರ್ಷಗಳು ಚಿತ್ರಕಲೆ ಅದ್ಭುತವಾಗಿ ನಮ್ಮ ದೇಶದಲ್ಲಿ ಬೆಳೆಯಿತು. ವಸ್ತು ಚಿತ್ರಗಳು, ವ್ಯಕ್ತಿ ಚಿತ್ರಗಳು, ಪ್ರಕೃತಿ ಸೌಂದರ್ಯವನ್ನು ಬೀರುವ ಚಿತ್ರಗಳು, ಬುದ್ಧ, ರಾಮ, ಕೃಷ್ಣ ಮೊದಲಾದ ಅವತಾರಪುರುಷರ ಚಿತ್ರ



ಗಳು, ದೇವದೇವಿಯರ ಚಿತ್ರಗಳು, ರಾಮಾಯಣ, ಮಹಾಭಾರತ, ಭಾಗವತ, ಜಾತಕ ಕತೆಗಳು ಮೊದಲಾದವುಗಳ ಕಥಾನಕಗಳನ್ನು ತೋರಿಸುವ ಚಿತ್ರಗಳು, ನಾಟ್ಯಭಂಗಿಗಳ ಚಿತ್ರಗಳು — ಹೀಗೆ ನಾನಾ ವಿಧವಾದ ಚಿತ್ರಗಳನ್ನು ಗೋಡೆ, ಕಲ್ಲು, ಮರ, ಕಾಗದ, ಚರ್ಮ ಮುಂತಾದ ಅನೇಕ ಮಾಧ್ಯಮಗಳ ಮೇಲೆ ಮೂಡಿಸಿದರು. ಗುಪ್ತರ ಕಾಲದಲ್ಲಿ ಚೀನೀಯರು ಭಾರತದಿಂದ ಚಿತ್ರಕಲೆಯನ್ನು ಕಲಿತುಕೊಂಡರೆಂದು ಚೀನಾ ಯಾತ್ರಿಕರು ಬರೆದಿರುವರು. ಚಿತ್ರಕಲೆ ವೈವಿಧ್ಯಮಯವಾಗಿ ರಮಣೀಯವಾಗಿ ಬಹುರೂಪಿನಿಂದ ನಿರಂತರವಾಗಿ ವಿಕಾಸವಾಗುತ್ತಿದೆ.

### ಭಾರತೀಯ ಸಂಸ್ಕೃತಿಯ ಹಿರಿಮೆ

ಭಾರತೀಯ ಸಂಸ್ಕೃತಿ, ಲಲಿತ ಕಲೆ ಇವುಗಳ ಬಗ್ಗೆ ಪ್ರಸ್ತಾಪಿಸುವುದೆಂದರೆ ಆಕಾಶವನ್ನು ಅಂಗೈಯಲ್ಲಿ ತೋರಿದಂತೆ, ತೀರದಿಂದ ಸಾಗರದರ್ಶನ ಮಾಡಿದಂತೆ. ನಮ್ಮದು ಧಾರ್ಮಿಕ ಸಂಸ್ಕೃತಿ. ಧರ್ಮದ ಬುಗ್ಗೆಗಳಂತಿರುವ ಕಲೆಗಳು ಸಂಸ್ಕೃತಿಯ ಆವಿರ್ಭಾವ. ನಮ್ಮ ಕಲೆಗಳಿಗೆ ಶಾಸ್ತ್ರಾಧಾರವಿದೆ. ಆ ಶಾಸ್ತ್ರಗಳ ಕರ್ತೃಗಳು ಋಷಿಗಳು. ಕಲಾಸೌಂದರ್ಯ ಕಲೋಪಾಸಕರಿಂದ ಸೃಷ್ಟಿಯಾಗಿದೆ. ಕಲೆಗಳ ಅಧಿಷ್ಠಾತ್ರಿ ದೇವತೆ ಸರಸ್ವತಿ – ಕಾವ್ಯ ಸರಸ್ವತಿ, ಗಾನಸರಸ್ವತಿ, ನಾಟ್ಯ ಸರಸ್ವತಿ, ನಮ್ಮ ಸಂಸ್ಕೃತಿ ಮತ್ತು ಕಲೆ ಅಳಿಯದಿರಲು ಕಾರಣ, ಅವುಗಳ ಆಧಾರ ನಮ್ಮ ಸನಾತನ ಧರ್ಮ. ಧರ್ಮ ಭಾರತೀಯರ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿದೆ. ದೇವರ ಹೆಸರನ್ನು ಹೇಳುತ್ತ ಹಾಸಿಗೆಯಿಂದ ಏಳುವರು. ಪುಣ್ಯನದಿಗಳ ಹೆಸರನ್ನು ಸ್ಮರಿಸುತ್ತಾ ಸ್ನಾನ ಮಾಡುವರು. ನಂತರ ಪೂಜೆ, ಪಾರಾಯಣ, ಧ್ಯಾನ. ಆಹಾರ ಸೇವಿಸುವ ಮುನ್ನ ದೇವರಿಗೆ ಅರ್ಪಣೆ, ಕೊನೆಯಲ್ಲಿ ಸಮರ್ಪಣೆ. ಹೊಸ ಉಡುಪು ಧರಿಸುವಾಗ ಕೆಲಸ-ಕಾರ್ಯಗಳನ್ನು ಪ್ರಾರಂಭಿಸುವಾಗ ಪ್ರಾರ್ಥನೆ, ಮುಗಿದಾಗ ಧನ್ಯತೆ. ವಿದ್ಯಾಭ್ಯಾಸವೂ ಪ್ರಾರ್ಥನೆಯೊಂದಿಗೇ ಪ್ರಾರಂಭವಾಗುವುದು. ದೇವರ ನಾಮ ಸ್ಮರಣೆಯೊಂದಿಗೆ ನಿದ್ರೆಗೆ ಹೋಗುವರು. ನಮ್ಮ ಎಲ್ಲ ವ್ಯವಹಾರಗಳ ಹಿಂದೆಯೂ ಧಾರ್ಮಿಕತೆ ಇದೆ.

ನಮ್ಮ ನಾಗರಿಕತೆ ಅತ್ಯಂತ ಪ್ರಾಚೀನವಾದುದು. ಇಂತಹ ಭವ್ಯ ಪರಂಪರೆಗೆ ಹಕ್ಕುದಾರರಾದ ನಾವು ನಮ್ಮ ಹಿಂದಿನದನ್ನು ತಿಳಿಯಬೇಕು. ಸ್ವಾಮಿ ವಿವೇಕಾನಂದರು, ಅವರಿನ್ನೂ ಅಮೆರಿಕಾದಲ್ಲಿ ಪ್ರವಚನಗಳನ್ನು ಮಾಡುತ್ತಿದ್ದ ಕಾಲದಲ್ಲಿ ೧೮೯೫ರಲ್ಲಿ ಖೇತ್ರಿಯ ರಾಜರ ಪತ್ರವೊಂದಕ್ಕೆ ಉತ್ತರವೀಯುತ್ತಾ ಹೀಗೆ ಬರೆಯುತ್ತಾರೆ:

''ಭಾರತದ ವೀರ್ಯಶಕ್ತಿ ಧರ್ಮದಲ್ಲಿದೆ. ಎಲ್ಲಿಯವರೆಗೆ ಹಿಂದೂ ಜನಾಂಗ ಅವರ ಪೂರ್ವಿಕರ ಭವ್ಯ ಪರಂಪರೆಯನ್ನು ಮರೆಯುವುದಿಲ್ಲವೋ ಅಲ್ಲಿಯವರೆಗೆ ಪ್ರಪಂಚದ ಯಾವ ಶಕ್ತಿಯೂ ಅವರನ್ನು ನಾಶಗೊಳಿಸಲಾಗದು. ''

ಇಂದಿನ ದಿನಗಳಲ್ಲಿ ಯಾರು ಅವರ ಹಿಂದಿನದನ್ನು ಯಾವಾಗಲೂ ನೆನಪಿಸಿಕೊಳ್ಳುತ್ತಿರುತ್ತಾರೊ ಅವರನ್ನು ನಿಂದಿಸುವರು. ಅಷ್ಟರ ಮಟ್ಟಿಗೆ ಗತಕಾಲವನ್ನು ಸ್ಮರಿಸಿಕೊಳ್ಳುವುದೇ ಭಾರತೀಯರ ಸಮಸ್ಯೆಗಳಿಗೆ ಕಾರಣವೆಂದು ಹೇಳಲಾಗುತ್ತಿದೆ. ನನಗೆ, ಅದಕ್ಕೆ ವಿರೋಧವಾಗಿ, ಅದರ ವಿರುದ್ಧವಾಗಿರುವುದು ಸರಿಯೆನಿಸುತ್ತದೆ. ಎಲ್ಲಿಯವರೆಗೆ ಅವರ ಹಿಂದಿನದನ್ನು ಮರೆತಿದ್ದರೊ ಅಲ್ಲಿಯವರೆಗೆ ಹಿಂದೂ ದೇಶ ಮಂಪರು ನಿದ್ರೆಯಲ್ಲಿ ನಿಶ್ಚೇಷ್ಟಿತ

ವಾಗಿತ್ತು. ಅವರ ಹಿಂದಿನದನ್ನು ತಿಳಿಯಲು ಪ್ರಯತ್ನಿಸಿದ ಕೂಡಲೆ ಎಲ್ಲೆಡೆ ನವಚೇತನ ಅಭಿವ್ಯಕ್ತವಾಗುತ್ತಿದೆ. ಈ ಗತಕಾಲದಿಂದ ಭವಿಷ್ಯತ್ಕಾಲ ರೂಪುಗೊಂಡಿದೆ. ಭೂತ ಭವಿಷ್ಯತ್ ಆಗುತ್ತದೆ.

ಆದ್ದರಿಂದ, ಹಿಂದೂಗಳು ಹಿಂದಿನದನ್ನು ಅಧ್ಯಯನ ಮಾಡಿದಷ್ಟೂ ಅವರ ಭವಿಷ್ಯ ಭವ್ಯವಾಗುವುದು, ಮತ್ತು ಯಾರು ಹಿಂದಿನದನ್ನು ಎಲ್ಲರ ಬಾಗಿಲಿಗೆ ತಲುಪಿಸುತ್ತಾರೆಯೊ ಅವರು ತಮ್ಮ ದೇಶಕ್ಕೆ ದೊಡ್ಡ ಹಿತಕಾರಿಗಳಾಗುತ್ತಾರೆ.

ನಮ್ಮ ಪೂರ್ವಿಕರು ಹುಟ್ಟು ಸೌಂದರ್ಯೋಪಾಸಕರು. ರಸಋಷಿಗಳು. ಅವರ ಮೇಧಾಶಕ್ತಿ ಅಪೂರ್ವವಾದುದು. ಅವನ್ನು ಹೀರಿ ಬೆಳೆದಷ್ಟೂ ನಾವು ಬಲಿಷ್ಠರಾಗುತ್ತೇವೆ. ನಮ್ಮ ಸಂಸ್ಕೃತಿ ಮತ್ತು ಕಲೆಯ ಮಹತ್ತನ್ನು ನಾವು ಇನ್ನೂ ಸರಿಯಾಗಿ ಅರಿತುಕೊಳ್ಳಬೇಕಾಗಿದೆ. ಒಮ್ಮೆ ಸ್ವಾಮಿ ವಿವೇಕಾನಂದರು, ಅಮೆರಿಕಾ ದೇಶಕ್ಕೆ ಹೋಗುವ ಮುನ್ನ, ಮದರಾಸಿನಲ್ಲಿ ಒಬ್ಬ ಬಾಲಕ



ಕಾಳಿದಾಸನ ಕುಮಾರ ಸಂಭವವನ್ನು ಓದುತ್ತಿದ್ದಾಗ ಅದರಲ್ಲಿ ಬರುವ ಹಿಮಾಲಯದ ವರ್ಣನೆಯನ್ನು ಓದುವಂತೆ ಹೇಳಿದರು. ಅದು ಹೀಗಿತ್ತು:

**ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ**
**ಹಿಮಾಲಯೋ ನಾಮ ನಗಾಧಿರಾಜಃ।**
**ಪೂರ್ವಾಪರೌ ತೋಯನಿಧೀ ವಗಾಹ್ಯ**
**ಸ್ಥಿತಃ ಪೃಥಿವ್ಯಾ ಇವ ಮಾನದಂಡಃ॥**

ಇದನ್ನು ಕೇಳಿದ ವಿವೇಕಾನಂದರು ಭಾವಪರವಶರಾಗಿ ತಾವೇ ಅದನ್ನು ಮತ್ತೆ ಉಚ್ಚರಿಸಿ, ಅದರ ಸಾರವನ್ನು ವಿವರಿಸಿದರು: ಈ ಶ್ಲೋಕದಲ್ಲಿ ಮುಖ್ಯವಾದ ಪದಗಳು, ದೇವತಾತ್ಮಾ ಮತ್ತು ಮಾನದಂಡ. ಹಿಮಾಲಯ, ಪ್ರಕೃತಿ ಅಕಸ್ಮಾತ್ತಾಗಿ ನಿರ್ಮಿಸಿದ ಗೋಡೆಯಲ್ಲ. ದೈವತ್ವ ಅದರ ಆತ್ಮ. ಅದು ಭರತಖಂಡ ಮತ್ತು ಅದರ ನಾಗರಿಕತೆಯ ಸಂರಕ್ಷಕ, ಕೇವಲ ಉತ್ತರ ಧ್ರುವದ ಅತಿಶೀತ ಚಂಡಮಾರುತಗಳಿಂದ ಮಾತ್ರವಲ್ಲ, ಸಂಹಾರಿ ವಿನಾಶಕಾರಿ ಆಕ್ರಮಣಕಾರಿಗಳಿಂದಲೂ ಕೂಡ. ಭಾರತೀಯ ನಾಗರಿಕತೆ ಎಲ್ಲಾ ಮಾನವ ನಾಗರಿಕತೆಗಳಿಗಿಂತಲೂ ಶ್ರೇಷ್ಠವಾದುದು ಮತ್ತು ಹಿಂದಿನ, ಇಂದಿನ ಮತ್ತು ಭವಿಷ್ಯದ ನಾಗರಿಕತೆಗಳ ಮೌಲ್ಯಗಳನ್ನು ನಿಷ್ಕರ್ಷಿಸಲು ಅದೊಂದು ಮಾನದಂಡವಾಗಿದೆ ಎಂದು ಕವಿ ದೃಢಪಡಿಸಿದ್ದಾನೆ. ಕವಿಯ ಉನ್ನತ ರಾಷ್ಟ್ರಭಕ್ತಿ ಅಂತಹುದಾಗಿತ್ತು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇನ್ನೂ ೭೫ ವರ್ಷಗಳೂ ಆಗಿಲ್ಲ. ಒಂದು ದೇಶದ ಆಯುಸ್ಸಿನಲ್ಲಿ ಇದು ಅತ್ಯಲ್ಪ ಕಾಲ. ಭಾರತ ಜಾಗೃತವಾಗುತ್ತಿದೆ. ಸ್ವಾತಂತ್ರ್ಯ ಬಂದ ಐದು ವರ್ಷಗಳಲ್ಲಿಯೇ ನಮ್ಮ ದೇಶದ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಭಾರತ ಸರ್ಕಾರ ಸಂಗೀತ ನಾಟಕ ಅಕಾಡೆಮಿ ಮತ್ತು ಲಲಿತ ಕಲಾ ಅಕಾಡೆಮಿಯನ್ನು ಸ್ಥಾಪಿಸಿತು. ಇಂತಹ ಪ್ರಯತ್ನಗಳೊಂದಿಗೆ ಭಾರತದ ಪ್ರಜೆಗಳಾದ ನಾವು ನಮ್ಮ ಸಂಸ್ಕೃತಿ-ಕಲಾಸಾಗರದ ದರ್ಶನವನ್ನು ಮಾಡಿ ನಮ್ಮ ಚೇತನವನ್ನು ಶ್ರೀಮಂತಗೊಳಿಸಿಕೊಳ್ಳುವುದರ ಮೂಲಕ ನಮ್ಮ ಕೈಂಕರ್ಯವನ್ನು ಸಲ್ಲಿಸಬೇಕಾಗಿದೆ.

### ಗ್ರಂಥ ಋಣ


೧ ***ಸ್ವಾಮಿ ರಂಗನಾಥಾನಂದ:*** *ಆಧುನಿಕ ಭಾರತದಲ್ಲಿ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳು, 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು', ಸಂಪುಟ ೩, ಪ್ರವಚನ ೩೪, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೨೦೦೭*

೨ ***ಹರಿಪದ ಮಿತ್ರ:*** *'ಸ್ವಾಮಿ ವಿವೇಕಾನಂದ ದಿವ್ಯಸ್ಮೃತಿ', ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೧೯೭೭*

೩ ***ಸೋದರಿ ನಿವೇದಿತಾ :*** *'ನಿವೇದಿತಾ ಕೃತಿಶ್ರೇಣಿ' (ಇಂಗ್ಲಿಷ್) ಭಾಗ ೩, ಪುಟ ೩೯*

೪ ***ಕೃಷ್ಣ, ಎಂ.ಎಚ್.:*** *'ಅಜಂತ ಮತ್ತು ಎಲ್ಲೋರ', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೬೭*

೫ ***ರಾಮಚಂದ್ರ ರಾವ್ ಎಸ್.ಕೆ.:*** *'ಪ್ರಾಚೀನ ಸಂಸ್ಕೃತಿ', ಬೆಂಗಳೂರು ವಿಶ್ವವಿದ್ಯಾನಿಲಯ, ೧೯೭೨*

೬ ***ಸ್ವಾಮಿ ವಿವೇಕಾನಂದ:*** *ನಮ್ಮ ಪ್ರಸ್ತುತ ಕರ್ತವ್ಯ: 'ಕೊಲಂಬೊ ಇಂದ ಆಲ್ಮೋರಕೆ', ಶ್ರೀರಾಮಕೃಷ್ಣ ಆಶ್ರಮ, ಮೈಸೂರು*

೭ ***ಆನಂದ ಕುಮಾರಸ್ವಾಮಿ:*** *'ಇಂಟ್ರೊಡಕ್ಷನ್ ಟು ಇಂಡಿಯನ್ ಆರ್ಟ್ಸ್', ೧೯೨೩*

೮ ***ಸಾಂಬಮೂರ್ತಿ, ಪಿ.:*** *'ತ್ಯಾಗರಾಜ', ನ್ಯಾಷನಲ್ ಬುಕ್ ಟ್ರಸ್ಟ್, ೧೯೬೭*

೯ ***ವೆಂಕಟರಾಮ ಅಯ್ಯರ್ ಟಿ.ಎಲ್.:*** *'ಮುತ್ತುಸ್ವಾಮಿ ದೀಕ್ಷಿತರು', ನ್ಯಾಷನಲ್ ಬುಕ್ ಟ್ರಸ್ಟ್, ೧೯೬೮*

೧೦ ***ವಿದ್ಯಾ ಶಂಕರ್:*** *'ಶ್ಯಾಮಾಶಾಸ್ತ್ರಿ', ನ್ಯಾಷನಲ್ ಬುಕ್ ಟ್ರಸ್ಟ್, ೧೯೭೦*

೧೧ ***ಸಾಂಬಮೂರ್ತಿ, ಪಿ.:*** *'ದಿ ಫ್ಲೂಟ್', (೧೯೨೭), ದಿ ಇಂಡಿಯನ್ ಮ್ಯೂಸಿಕ್ ಪಬ್ಲಿಷಿಂಗ್ ಹೌಸ್, ೧೯೮೨*